ಮನುಷ್ಯನಿಗೆ ಗುರಿ ಮತ್ತು ಛಲ ಇದ್ದರೆ ಸಮಾಜದಲ್ಲಿ ಮೇಲೆ ಬರಲು ಸಾಧ್ಯ ಕೆ.ಎನ್.ರಾಜಣ್ಣ ಅಭಿಪ್ರಾಯ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಮನುಷ್ಯನಿಗೆ ಗುರಿ ಮತ್ತು ಛಲ ಇದ್ದರೆ ಸಮಾಜದಲ್ಲಿ ಮೇಲೆ ಬರಲು ಸಾಧ್ಯ ಎಂದು ಮಾಜಿ ಸಚಿವ, ಮಧುಗಿರಿ ಕ್ಷೇತ್ರದ ಶಾಸಕ ಹಾಗೂ ಡಿಸಿಸಿ ಬ್ಯಾಂಕ್ ಅಧ್ಯಕ್ಷರಾದ ಕೆ.ಎನ್.ರಾಜಣ್ಣ ಅಭಿಪ್ರಾಯಪಟ್ಟಿದ್ದಾರೆ.

ನಗರದ ಡಾ.ಗುಬ್ಬಿ ವೀರಣ್ಣ ಕಲಾ ಕ್ಷೇತ್ರದಲ್ಲಿ ತುಮಕೂರು ಜಿಲ್ಲಾ ವಾಲ್ಮೀಕಿ ನಾಯಕರ ಕ್ಷೇಮಾಭಿವೃದ್ಧಿ ಸಂಘ(ರಿ), ಶಬರಿ ಮಹಿಳಾ ಪತ್ತಿನ ಸಹಕಾರ ಸಂಘ, ನಿ. ತುಮಕೂರು ವಾಲ್ಮೀಕಿ ಸಹಕಾರ ಸಂಘ(ರಿ),ನಿ. ಶ್ರೀವಾಲ್ಮೀಕಿ ವಿದ್ಯಾವರ್ಧಕ ಸಂಘ(ರಿ), ಮತ್ತು ಜಿಲ್ಲಾ ನಾಯಕ ಮಹಿಳಾ ಸಮಾಜ ಆಯೋಜಿಸಿದ್ದ 2025-26ನೇ ಸಾಲಿನ ಎಸ್.ಎಸ್.ಎಲ್.ಸಿ.,ಪಿಯುಸಿ ವಿದ್ಯಾರ್ಥಿಗಳಿಗೆ ಮರ್ಹಾಡಿಸಿದ್ದ 4ನೇ ವರ್ಷದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡುತಿದ್ದ ಅವರು, ಶಿಕ್ಷಣದ ಮೂಲಕ ಯಾರ ಮೇಲೂ ಅವಲಂಬನೆಯಾಗದೆ, ಆತ್ಮಸ್ಥೈರ್ಯದಿಂದ ಬದುಕುವ ವಾತಾವರಣವನ್ನು ಸಮುದಾಯದ ಯುವ ಜನರು ರೂಢಿಸಿಕೊಳ್ಳಬೇಕೆಂದರು.

ಸಮುದಾಯದ ಸಂಘಟನೆಗೆ ಪ್ರತಿಭಾ ಪುರಸ್ಕಾರವೆಂಬುದು ಒಂದು ಕಾರಣ. ಪ್ರತಿಭೆಗೆ ಪ್ರೋತ್ಸಾಹಿಸುವುದು ಒಂದು ಕಡೆಗೆ ಹೆಮ್ಮೆ ಮತ್ತು ಮತ್ತೊಂದು ಕಡೆಗೆ ಜವಾಬ್ದಾರಿ ಕೂಡ ಆಗಿದೆ.ಇಂತಹ ಕಾರ್ಯಕ್ರಮಗಳು ಪ್ರತಿತಾಲೂಕು ಹಂತದಲ್ಲಿಯೂ ನಡೆದರೆ ಸಮುದಾಯದ ಸಂಘಟನೆಗೆ ಹೆಚ್ಚು ಪೂರಕವಾಗಲಿದೆ. ಅಲ್ಪದೆಯುನ್ನತ ಸ್ಥಾನದಲ್ಲಿರುವ ಹಿರಿಯರ ಮಾರ್ಗದರ್ಶನಕಿರಿಯರುಗಿಗೆ ದೊರೆತು, ಆದರು ಸಹ ಉನ್ನತ್ತಿಯತ್ತ ಚಲಿಸಲು ಸಹಕಾರಿಯಾಗಲಿದೆ ಎಂದು ಕೆ.ಎನ್.ರಾಜಣ್ಣ ನಾನು ಹುಟ್ಟಿತಲೇ ನಾಯಕ ಎಂಬ ಆಹಂನ್ನು ಬಿಟ್ಟು ಎಲ್ಲಾ ಸಮುದಾಯದ ಪ್ರೀತಿ, ವಿಶ್ವಾಸ, ನಂಬಿಕೆಯನ್ನು ಗಳಿಸುವ ಮೂಲಕ ಜನ ನಾಯಕರಾಗುವತ್ತ ಚಿತ್ತ ಹರಿಸಬೇಕು.ಹಾಗೂಯೇ ಉನ್ನತ ಸ್ಥಾನದಲ್ಲಿರುವ ಸಮುದಾಯದ ವ್ಯಕ್ತಿಗಳು ಜನರ ನಂಬಿಕೆಗೆ ಚ್ಯುತಿ ಬರದಂತೆ ಕೆಲಸ ಮಾಡಿ, ಶಬ್ದ,ಹುಟ್ಟು ಸಮುದಾಯಗಳಿಗೆ ಅಧಿಕಾರ ನೀಡುವ ಮೂಲಕ ಅವರನ್ನು ನಮ್ಮಜೊತೆಗೆ ತೆಗೆದುಕೊಂಡು ಹೊಗುವ ಕೆಲಸ ಮಾಡಬೇಕೆಂದು ಸಲಹೆ ನೀಡಿದರು.

ಮೀಸಲಾತಿ ಇದೆ ಎಂಬ ಕಾರಣಕ್ಕೆ ಸಮುದಾಯದ ಯುವಜನರು, ರಾಜಕಾರಣಿಗಳು ನಿರ್ಲಕ್ಷ ತಾಳಬಾರದು.ಒಂದೇ ಸಮುದಾಯದ ಜನರಿಗೆ ಗೆಲುವು ಸಾಧ್ಯವಿಲ್ಲ. ಹಾಗಾಗಿಎಲ್ಲ ಸಮುದಾಯದ ಜನರ ವಿಶ್ವಾಸಗಳಿಸಬೇಕು. ತುಮಕೂರು ಕ್ಷೇತ್ರದಲ್ಲಿ ಹಕ್ಕೇತರರು ಗೆಲ್ಲುವುದು ಹೋಗಲಿ, ನಾಲ್ಕು ಅಂಕಿ ದಾಟಿದ ಉದಾಹರಣೆಯಲ್ಲ. ಆದರೆ 1994ರಲ್ಲಿ ನಾನು ಹಕ್ಕೇತರನಾಗಿ ಸ್ಪರ್ಧಿಸಿದಾಗ ನನ್ನ ನಿರೀಕ್ಷೆಗೂ ಮೀರಿ 26 ಸಾವಿರ ಮತ ನೀಡಿದರು. ಹಾಗಾಗಿ ನಾನು ಸಾಮಾನ್ಯ ಕ್ಷೇತ್ರಗಳಲ್ಲಿ ಸ್ಪರ್ಧಿಸಬಹುದು ಎಂಬ ನಂಬಿಕೆ ಮೂಡಲು ಕಾರಣವಾಯಿತು.ಆದೇ ನಂಬಿಕೆಯಲ್ಲಿ ಸಾಮಾನ್ಯ ಕ್ಷೇತ್ರಗಳಲ್ಲಿಯೇ ಸ್ಪರ್ಧಿಸಿ ಮೂರು ಬಾರಿ ಶಾಸಕನಾಗಿ ಮಂತ್ರಿಯೂ ಆದೆ.ಮೀಸಲು ಕ್ಷೇತ್ರವೆಂದು ನಂಬಿ ಕುಳಿತಿದ್ದರೇ, ಶಾಸಕರು ಆಗುತ್ತಿರಲಿಲ್ಲ ಎಂದು ಶಾಸಕ ಕೆ.ಎನ್.ರಾಜಣ್ಣ ಇಂದಿನ ರಾಜಕೀಯ ವ್ಯವಸ್ಥೆಯನ್ನುಜನರ ಮುಂದಿಟ್ಟರು.

ನಮ್ಮ ಕಾಲದಲ್ಲಿ ಸರಿಯಾಗಿ ಶಾಲೆಯೇಇರಲಿಲ್ಲ. ಹತ್ತಾರು ಕಿ.ಮಿ.ನಡೆದು ಹೋಗಬೇಕಾಗಿತ್ತು. ಆದರೆ ಇಂದು ನಿಮ್ಮ ಮನೆ ಬಾಗಿಲಿನಲ್ಲಿಯೇ ಎಲ್ಲವೂ ಇದೆ. ಸರಕಾರದ ಸವಲತ್ತುಗಳು ಸಾಕಷ್ಟು ಇದೆ.ಇವುಗಳನ್ನು ಬಳಸಿಕೊಂಡು ಗುಣಮಟ್ಟದ ವಿಕ್ಷಣ ಪಡೆದು, ಉನ್ನತ ಹುದ್ದೆಗಳ ಕಡೆಗೆ ಗಮನಸಹರಿಸಬೇಕು.ನಿಮ್ಮ ಮುಂದೆ ಸಾಕಷ್ಟುಆರ್ಹಗಳಿಗೆವೆ.ಅವುಗಳನ್ನು ಬದಿಗೊತ್ತಿಗೆ, ಕೀಳಿರಿಮೆ ಬಿಟ್ಟು ಒಳ್ಳೆಯವರ ಸಹವಾಸದೊಂದಿಗೆ,ಸಮಾಜದಲ್ಲಿ ಘನತೆಯುಕ್ತ ವ್ಯಕ್ತಿಗಳಾಗಿ ಬದುಕಿ, ನಿಮಗೆ ಬೇಕಾದ ಸಹಾಯಕ್ಕೆ ನಾವಿದ್ದೇವೆಎಂದು ವಿದ್ಯಾರ್ಥಿಗಳಿಗೆ ಧೈರ್ಯವೆ ನೀಡಿದರು.

ನಿವೃತ್ತ ಐಎಎಸ ಅಧಿಕಾರಿ ಶಾಲಿಯ್ಯ ಮಾತನಾಡಿ, ವಿದ್ಯಾರ್ಥಿಗಳಿಗೆ ಗುರಿ ಮುಖ್ಯ. ನಾನು ವಿನಾಗಬೇಕು ಎಂದು ಈ ವಯಸ್ಸಿನಲ್ಲಿಯೇ ನಿರ್ಧರಿಸಿ, ಅದರ ಸಕಾರಕ್ಕೆ ಪರಿಶ್ರಮ ಹಟ್ಟಿದೆಯಿಲ್ಲವೂ ಸಾಧ್ಯ. ಹಾಗೆಯೇ ಹೋಷಕರು ಸಹ ತಮ್ಮ ಮಕ್ಕಳ ಚಲನವಲನಗಳ ಮೇಲೆ ನಿಗಾ ಇರಿಸಿ, ಅವರುತಪ್ಪುದಾರಿ ತುಳಿಯದಂತೆ ಎಚ್ಚರಿಕೆ ವಹಿಸಬೇಕು. ಅವಕಾಶಗಳ ಮಹಾಹೂರವೇ ನಿಮ್ಮ ಮುಂದಿದೆ. ಅದನ್ನು ತಮ್ಮದಾಗಿಸಿಕೊಳ್ಳವ ಛಲವಂತರು ನೀವಾಗಬೇಕೆಂದರು.

ಕೂಡ್ಲಿಗಿ ಶಾಸಕ ಹಾಗೂ ಕರ್ಣಾಟಕ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ.ಶ್ರೀನಿವಾಸ್ ಮಾತನಾಡಿ, ಇಂದು ಶಾಲಾ, ಕಾಲೇಜುಗಳಲ್ಲಿ ಮಾದಕ ವಸ್ತುಗಳ ಹಾವಳಿ ಹೆಚ್ಚಾಗಿದೆ. ಹೈಸ್ಕೂಲ್‌ಗಳಲ್ಲಿ ಮಕ್ಕಳು ಇಂತಹಕೆಟ್ಟ ಚಟುಗಳಿಗೆ ಬಲಿಯಾಗುತ್ತಿದ್ದಾರೆ. ಇದನ್ನುತಡೆಗಟ್ಟುವನಿಟ್ಟಿನಲ್ಲಿ ನಾವೆಲ್ಲರುಕಳ್ಳೆಹೊಡೆಸಬೇಕಾಗಿದೆ. ಯುವಜನರು ತಮ್ಮದಾರಿಯಲ್ಲಿ ಸ್ವತ್ತತೆಯನ್ನುಕಂಡುಕೊಂಡು, ಅದರತ್ತ ಮುನ್ನೆಡೆಯಬೇಕು. ವಾಲ್ಮೀಕಿ ನಾಯಕ ಸಮುದಾಯಕ್ಕೆ ಕೆ.ಎನ್.ರಾಜಣ್ಣ ಪ್ರಶ್ನಾತೀತ ನಾಯಕ ಅವರು ಮತ್ತೊಮ್ಮೆ ಮಂತ್ರಿಯಾಗಬೇಕೆಂಬುದು ನಮ್ಮೆಲ್ಲರ ಮನದಾಸೆಎಂದರು. ತುಮಕೂರುಜಿಲ್ಲಾ ವಾಲ್ಮೀಕಿ ನಾಯಕರ ಕ್ಷೇಮಾಭಿವೃದ್ಧಿ ಸಂಘ(ರಿ), ನ ಅಧ್ಯಕ್ಷರಾದ ಶಾತಪಾಲರಾಜಣ್ಣ ಮಾತನಾಡಿ,ಇಂದು ಪಿಯುಸಿಯ 150 ಜನ, ಎಸ್.ಎಸ್.ಎಲ್.ಸಿಯ 180 ಜನ ಹಾಗು ಸ್ನಾತಕೋತ್ತರ ಪದವಿಯಿಚ್ಚಿನ್ನದ ಪದಕ ವಿಜೇತರು, ಕೆ.ಎ.ಎಸ್‌ಅಧಿಕಾರಿಯಾಗಿ ನೇಮಕ ಆಗಿರುವವರು ಸೇರಿಒಟ್ಟು 350 ಜನರಿಗೆ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ.ಇಂದು ಪ್ರತಿಭಾ ಪುರಸ್ಕಾರ ಸ್ವೀಕರಿಸುತ್ತಿರುವ ಮಕ್ಕಳು ಮುಂದೆ ಮೇದಿಕೆಯ ಮೇಲೆ ಕೂರುವಂತಹ ಉನ್ನತ ಸ್ಥಾನಕ್ಕೆ ಬರಬೇಕೆಂಬುದು ನಮ್ಮೆಲ್ಲರ ಹಾರೈಕೆಎಂದರು. ಪರಿಶಿಷ್ಟ ವರ್ಗಗಳ ಕಲ್ಯಾಣಇಲಾಖೆಯಯಿಂದಿಂದ ನಿರ್ದೇಶಕಾ.ರಾಜಕುಮಾರ್, ವೈದ್ಯರಾದ ಡಾ.ಅನಿಲ್‌ಕುಮಾರ್ ವಿದ್ಯಾರ್ಥಿಗಳಿಗೆ ಸರಕಾರದಿಂದದೊರೆಯುವ ಸೌಲಭ್ಯ ಅವುಗಳ ಬಳಕೆ,ಭವಿಷ್ಯದನ್ನು ಎದುರಿಸುವ ಕುರಿತು ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀವಾಲ್ಮೀಕಿ ವಿದ್ಯಾವರ್ಧಕ ಸಂಘದಅಧ್ಯಕ್ಷರಾದ ಹೆಚ್.ಜಿ.ಹುಚುಹೋತ್ತಮ್ ವಹಿಸಿದ್ದರು. ಮಾಜಿ ಮಹಾಪೌರರಾದ ಟಿ.ಜಿ.ಕೃಷ್ಣಪ್ಪ,ಟಿ.ಡಿಆಲಯಂಕಳುಲಮೇಶ್‌ಚಂದ್ರ, ಉಪಾಧ್ಯಕ್ಷ ಅರಣ್ಯ ಸಂರಕ್ಷಣಾಧಿಕಾರಿ ಶಶಿಧರ್ ಜಿ.ಆರ್, ಎಇಇ ಹನುಮಂತರಾಯಪ್ಪ, ಹೆಚ್.ಬಿಎಳೆಶ್, ಇಇ ಎನ್. ಅನಿಲ್‌ಕುಮಾರ್, ಕಿ.ರಂಗನಾಥ್, ದೊಡ್ಡರಂಗಯ್ಯ ಮತ್ತಿತರರು ಉಪಸ್ಥಿತರಿದ್ದರು.

2025-26ನೇ ಸಾಲಿನ ಎಸ್.ಎಸ್.ಎಲ್.ಸಿ ಮತ್ತು ಪಿಯುಸಿ ಯಲ್ಲಿಅತಿ ಹೆಚ್ಚು ಅಂಕ ಪಡೆದ ಮಕ್ಕಳು ಹಾಗೂ ಸ್ನಾತಕೋತ್ತರ ಪದವಿಯಲ್ಲಿ ಚಿನ್ನದ ಪದಕ ಪಡೆದ, ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಚಿನ್ನದ ಪದಕ ಪಡೆದವರನ್ನುಅಭಿನಂದಿಸಲಾಯಿತು.

ಚಿಕ್ಕದಾಳವಟ್ಟ ಗ್ರಾಮದ ಸರ್ಕಾರಿ ಪಾಠ ಶಾಲೆ ಕರ್ನಾಟಕ ಪಬ್ಲಿಕ್ ಶಾಲೆಯನ್ನಾಗಿ ಮೇಲ್ದರ್ಜೆಗೆ

ಮಧುಗಿರಿ: ತಾಲೂಕಿನ ಐ.ಡಿ.ಹಳ್ಳಿ ಹೋಬಳಿಯ ಹಾಗೂ ಗಡಿ ಗ್ರಾಮವಾಗಿರುವ ಚಿಕ್ಕದಾಳವಟ್ಟ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಶಶಾಲೆಯನ್ನು ಕರ್ನಾಟಕ ಪಬ್ಲಿಕ್ ಶಾಲೆಯನ್ನಾಗಿ ಸರ್ಕಾರವು ಉನ್ನತ್ತಿಕರಿಸಿ ಮೇಲ್ದರ್ಜೆಗೇರಿಸಿರುವುದು ಗ್ರಾಮಸ್ಥರಲ್ಲಿ ಸಂತಸ ಮೂಡಿಸಿದೆ.

ರಾಜ್ಯದಲ್ಲಿನ 500 ಸರ್ಕಾರಿ ಶಾಲೆಗಳನ್ನು ರಾಜ್ಯದ ಆಯವ್ಯಯ ಮತ್ತು ಏಷಿಯನ್ ಡೆವಲೆಪ್ಮೆಂಟ್ ಸಾಲ ಯೋಜನೆಯ ಅನುದಾನದಲ್ಲಿ ಹೆಚ್ಚುವರಿ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಮುಂದಿನ ಕ್ರಮಗಳಿಗೆ ಒಳಪಡಿಸ್ತಾ 2026-27ನೇ ಶೈಕ್ಷಣಿಕ ಸಾಲಿನಲ್ಲಿ 496 ಶಾಲೆಗಳನ್ನು ಸುಸಜ್ಜಿತ ಕರ್ನಾಟಕ ಪಬ್ಲಿಕ್ ಶಾಲೆಗಳಾಗಿ ಉನ್ನತಿಕರಿಸಲಾಗಿದ್ದು ಚಿಕ್ಕದಾಳವಟ್ಟ ಗ್ರಾಮದ ಶಾಲೆಯ ಕ್ರಸಂ 396ನೇ ಸಂಖ್ಯೆಯ ಶಾಲೆಯಾಗಿ ಉನ್ನತಿಕರಿಸಿ ಸರ್ಕಾರ ಆದೇಶ ಹೊರಡಿಸಿದೆ.ಈ ಶಾಲೆಯ 29310406501 ಡೈಸ್ ಕೋಡ್ ನೀಡಲಾಗಿದ್ದು ಅಗತ್ಯವಿರುವ ಹುದ್ದೆಗಳ ಸೃಜನೆಯನ್ನು ಇಲಾಖೆಯಿಂದ ಈಗಾಗಲೇ ಮಂಜೂರಾಗಿರುವ ಹುದ್ದೆಗಳಿಂದಲೇ ನಿರೋಜಿಸಿ ಸರಿದೂಗಿಸುವಂತೆ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆಯ ಹಾಗೂ ಸರ್ಕಾರದ ಅಧೀನ ಕಾರ್ಯದರ್ಶಿ ಎಸ್.ಪ್ರಕಾಶ್ ಆದೇಶಿಸಿದ್ದಾರೆ.

ಈ ಹಿಂದೆ ಗ್ರಾಮದಲ್ಲಿ ಕೆಪಿಎಸ್ ಶಾಲೆಯನ್ನು ಆರಂಭಿಸುವಂತೆ ಕ್ಷೇತ್ರದ ಶಾಸಕರಾದ ಕೆ.ಎನ್ ರಾಜಣ್ಣನವರನ್ನು ಶಾಲೆಯ ಹಿರಿಯ ವಿದ್ಯಾರ್ಥಿಗಳು ಹಾಗೂ ಮುಖಂಡರು ಭೇಟಿ ಮಾಡಿ ಮನವಿ ಪತ್ರ ಸಲ್ಲಿಸಿದ್ದರು ಇಗ ಕೆಪಿಎಸ್ ಶಾಲೆ ಗ್ರಾಮಕ್ಕೆ ಮಂಜೂರಾಗಲು ರಾಜಣ್ಣನವರೆ ಕಾರಣಿಭೂತರಾಗಿದ್ದು ಅವರು ತಾಲೂಕಿನಲ್ಲಿನ ಶಾಲಾ ಮಕ್ಕಳಿಗೆ ಸೂಪ್ರಭಾಗ್ಯಉಚಿತ ನೋಟ್ ಪುಸ್ತಕಗಳು ಹಾಗೂ ಅಂಗನವಾಡಿ ಮಕ್ಕಳಿಗೆ ಸಮವಸ್ತ್ರ ವಿತರಣೆ ಮಾಡಿದ್ದಾರೆ ಹಾಗೂ ಇತ್ತೀಚೆಗೆ ನಡೆದ ಕೆಡಿಪಿ ಸಭೆಯಲ್ಲಿ ಎಲ್ಲಾ ಸಮುದಾಯಗಳ ತಾಲೂಕಿನ ಆರ್ಹ ವಿದ್ಯಾರ್ಥಿಗಳಿಗೆ ಶೇ.100 ರಷ್ಟು ವಿದ್ಯಾರ್ಥಿವೇತನಕ್ಕೆ ಒಳಪಡಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದು ಅಧಿಕಾರಿಗಳು ಕಾರ್ಯಹೌಸ್ತ್ವತ್ತರಾಗಿರುವುದನ್ನು ಗಮನಿಸಿದರೆ ನಮ್ಮ ಶಾಸಕರು ವಿದ್ಯಾಭ್ಯಾಸಕ್ಕೆ ಹೆಚ್ಚು ಒತ್ತು ನೀಡುತ್ತಿರುವುದು ಒಂದು ಉದಾಹರಣೆಯಾಗಿ ಇಡೀ ರಾಜ್ಯಕ್ಕೆ ಮಾದರಿಯಾಗಿದ್ದು ಇವರ ಈ ಸೇವೆಯನ್ನು ನಾವುಗಳು ಎಂದಿಗೂ ಮರೆಯುವುದಿಲ್ಲಾ ಎಂದು ಗ್ರಾಮಸ್ಥ ಅನಿಲ್ ಕುಮಾರ್ ಚಿಕ್ಕದಾಳವಟ್ಟ ತಮ್ಮ ಅಭಿಪ್ರಾಯವನ್ನು ಪತ್ರಿಕೆಯೊಂದಿಗೆ ಹಂಚಿಕೊಂಡಿದ್ದಾರೆ.

ತುಮಕೂರಿನಲ್ಲಿ ಆಭರಣ ಪ್ರದರ್ಶನ ಮಳಿಗೆಗಳನ್ನು ಉದ್ಘಾಟಿಸಿದ ಸೋನಾಲ್ ಮೊತೇಂರೋ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು; ಒಂದೇ ಸೂರಿನಲ್ಲಿ ಮಹಿಳೆಯರಿಗೆ ಪ್ರಿಯವಾಗುವ ವಿವಿಧ ರೀತಿಯ ಆಭರಣಗಳನ್ನು ಎರಿಂದಿಸಲು ಸುಗಮವಾಗುವಂತೆ ನಾಡಿನ ಪ್ರತಿಷ್ಠಿತ ಜುವೆಲರಿ ಅಂಗಡಿಗಳ ವಿವಿಧ ರೀತಿಯ ಆಭರಣಗಳನ್ನು ಪ್ರದರ್ಶನಕ್ಕೆ ಇಡಲಾಗಿದ್ದು ಮಹಿಳೆಯರು ಇವರ ಸದುಪಯೋಗವನ್ನು ಪಡಿಸಿಕೊಳ್ಳಬೇಕು ಎಂದು ಚಿತ್ರನಟಿ ಸೋನಾಲ್ ಮೊತೇಂರೋ ಅವರು ತಿಳಿಸಿದರು..

ನಗರದ ಹೊರವಲಯದ ಗುಬ್ಬಿ ರಸ್ತೆಯ ಬಂಡಿಮನೆ ವಿವಾಹ ಕಲ್ಯಾಣ ಮಂಟಪದಲ್ಲಿ ಮೂರು ದಿನಗಳ ಕಾಲ ವಿವಿಧ ವಿವಿಧ ಜ್ಯುವೆಲರಿ ಮಳಿಗೆಗಳಿಂದ ಆವರಣ ಪ್ರದರ್ಶನ ಮತ್ತು ಮಾರಾಟ ಮಳಿಗೆಗೆಳನ್ನು ಉದ್ಘಾಟಿಸಿದ ಅವರು ಸರ್ಕಾರದಿಂದ ಮಾನ್ಯತೆ ಪಡೆದ ಪ್ರತಿಷ್ಠಿತ ಸರ್ಟಿಫೈಡ್ ಜುವೆಲರಿಗಳ ಆಭರಣಗಳು ಎಲ್ಲರ ಗಮನ ಸೆಳೆಯುತ್ತಿದ್ದು ಯುವತಿಯರಿಗೆ ಕಡಿಮೆ ತೂಕದ ಸುಂದರ ವಿನ್ಯಾಸವುಳ್ಳ ಹೊಸ ಆಭರಣಗಳು ಇಲ್ಲಿ ಲಭ್ಯವಿದ್ದು ತುಮಕೂರಿನಲ್ಲಿ ನಡೆದ ಈ ಆಭರಣ ಮೇಳಕ್ಕೆ ನಾನು ಹೆಮ್ಮೆಯಿಂದ ಬಂದು ಉದ್ಘಾಟಿಸಿದ್ದೇನೆ ಕಲ್ಪತರು ನಾಡಿನ ಜನರು ಇದರ ಉಪಯೋಗಿಗ ಪಡೆದುಕೊಳ್ಳಬೇಕು ಎಂದರು.

ಇದೇ ಸಂದರ್ಭದಲ್ಲಿ ತುಮಕೂರಿನ ವಿವಿಧ ಮಹಿಳಾ ಸಂಘಟನೆಗಳ ಮುಖಂಡರುಗಳು ಹಾಗೂ ಸಾರ್ವಜನಿಕರು ಆಭರಣ ಮಳಿಗೆಗೆ ಭೇಟಿ ನೀಡಿ ಖರಿದಿಗೆ ಮುಂದಾದರು

ತುಮಕೂರು ನಗರದ ಬಂಡಿಮನೆ ಕಲ್ಯಾಣ ಮಂಟಪದಲ್ಲಿ ಜ್ಯುವೆಲರಿ ಹೋ" ಪ್ರದರ್ಶನ ಮತ್ತು ಮಾರಾಟದ ಉತ್ಸವದ ಉದ್ಘಾಟನೆಯನ್ನು ಚಲನಚಿತ್ರನಟಿ ಸೋನಾಲ್ ಮೊಂಥೇರೋ ನೆರವೇರಿಸಿದರು. ಡಾ. ಪ್ರತಿಭಾ ರಂಗೇಗೌಡ, ಬಿಜ್ಜರ್ಯ ಸುರೇಶ್ ಗೌಡ, ಪ್ರಿಯಾ ಪ್ರದೀಪ್, ಆಶಾ ಪ್ರಸನ್ನಕುಮಾರ್, ಟಿ.ಆರ್.ಆನಸೂಯಾ, ವೀರಾವತಿ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಅರ್ಜಾನ ವರ, ಗಜರಾಜ್, ಸಿಂಹ ಜ್ಯುವೆಲರ್ಸ್, ಶ್ರೀ ಗಣೇಶ್ ಡೈಮಂಡ್ಸ್, ಶ್ರೀ ಲಕ್ಷ್ಮೀ ಡೈಮಂಡ್, ವಿವಾಂತ್, ನಿರ್ವಾಲ್ ಜ್ಯುವೆಲರ್ಸ್, ಸಪ್ತೋಷಿ, ಟ್ರೈಡ್ ಡೈಯಾ, ರೂಪಂ ಸಿಲ್ವರ್, ಎಮ್ಮಡಿ ಸಿಲ್ವರ್, ಸ್ವಸ್ಥಿ ನಿತ್ಯಾಸ್(ವಿಶಾಖಪಟ್ಟಣಂ), ಬಾಲಾಜಿ ಪರ್ಲ್ಸ್(ಚೆನ್ನೈ) ಭಾಗವಹಿಸುತ್ತಿರುವ ಆಭರಣ ಮಳಿಗೆಗಳು. ತುಮಕೂರಿನಿಂದ ಶ್ರೀ ಮಹಾಲಕ್ಷ್ಮಿ ಜ್ಯುವೆಲರ್ಸ್, ಭಾಗವಹಿಸುತ್ತಿರುವ ಆಭರಣ ಮಳಿಗೆಗಳು ಪಾಲ್ಗೊಂಡಿದ್ದರು.

ದೈವಿಕ ಕಾರ್ಯಗಳಿಂದ ಮನುಷ್ಯನ ಬದುಕು ಸಾರ್ಥಕತೆ ಕಾಣಲಿ

ಮಧುಗಿರಿ: ದೈವಿಕ ಕಾರ್ಯಗಳಿಂದ ಮನುಷ್ಯನ ಬದುಕು ಸಾರ್ಥಕತೆಯನ್ನು ಕಾಣಲಿ ಎಂದು ಎಲೆರಾಂಪುರ ಕುಂಚಿಟಿಗ ಮಠದ ಹನುಮಂತನಾಥ ಸ್ವಾಮೀಜಿಯವರು ಅಭಿಪ್ರಾಯಪಟ್ಟರು.

ತಾಲೂಕಿನ ಐಡಿಹಳ್ಳಿ ಹೋಬಳಿ ಬ್ಯಾಡರಹಳ್ಳಿ ಗ್ರಾಮದಲ್ಲಿ ಶ್ರೀ ಆಂಜನೇಯ ಸ್ವಾಮಿ ದೇವಾಲಯದ ಸಂಪ್ರೋಕ್ಷಣೆ, ನೂತನ ಧ್ವಜಸ್ಥಂಭದ ಪುನರ್ ಪ್ರತಿಷ್ಠಾಪನೆ, ಕುಂಭಾಭಿಷೇಕ ಮಹೋತ್ಸವದಲ್ಲಿ ದಿವ್ಯಸಾನಿಧ್ಯವಹಿಸಿ ಮಾತನಾಡುತ್ತಾ ಗ್ರಾಮದ ಭಕ್ತರು ನಿಷ್ಕಲ್ಮಶ ಭಕ್ತಿಯಿಂದ ಧಾರ್ಮಿಕ ಕಾರ್ಯಗಳು ನೆರವೇರುತ್ತಿರುವುದು ಸಂತಸದ ವಿಚಾರ. ಮನುಷ್ಯನು ಭಕ್ತಿ ಮಾರ್ಗದಲ್ಲಿ ನಡೆಯಬೇಕು. ದೈವಾರಾಧನೆಯಿಂದ ಮನಸಿಗೆ ನೆಮ್ಮದಿ ಶಾಂತಿ ದ

ಜಿಬಿಡಿಎ ಟೌನ್‌ಶಿಪ್ 19.69 ಕೋಟಿ ಭೂ ಪರಿಹಾರ ವಿತರಣೆ

ರಾಮನಗರ: ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅನುಷ್ಠಾನಕ್ಕೆ ತರುತ್ತಿರುವ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆಯ ಭೂಸ್ವಾಧೀನಕ್ಕೆ ಒಪ್ಪಿಗೆ ಸೂಚಿಸಿದ ಭೂ ಮಾಲೀಕರಿಗೆ ಪ್ರಾಧಿಕಾರದ ಅಧ್ಯಕ್ಷ ಗಾಣಕಲ್ ನಟರಾಜು ಅವರು ಪರಿಹಾರ ಚೆಕ್‌ಗಳನ್ನು ವಿತರಣೆ ಮಾಡಿದರು.

ನಗರದ ಕಂದಾಯ ಭವನದಲ್ಲಿರುವ ಪ್ರಾಧಿಕಾರದ ಕಚೇರಿಯಲ್ಲಿ ಗುರುವಾರ ಚೆಕ್ ವಿತರಿಸಿ ಮಾತನಾಡಿದ ಅವರು, ಅಂತಿಮ ಭೂಸ್ವಾಧೀನ ಅಧಿಸೂಚನೆ ಹೊರಡಿಸಿರುವ ಹಾರೋಹಳ್ಳಿ ತಾಲೂಕಿನ ವಡೇರಹಳ್ಳಿ, ಬಿಡದಿ ಹೋಬಳಿಯ ಕೆಂಪಯ್ಯನಪಾಳ್ಯ ಗ್ರಾಮ ವ್ಯಾಪ್ತಿಯಲ್ಲಿ 10 ಮಂದಿ ಭೂ ಮಾಲೀಕರು ತಮ್ಮ ಭೂಮಿಯನ್ನು ಭೂಸ್ವಾಧೀನಕ್ಕೆ ಒಳಪಡಿಸಲು ಒಪ್ಪಿಗೆ ಸೂಚಿಸಿದ್ದಾರೆ. ಇವರಿಗೆ ಒಟ್ಟು ರೂ. 19,69,72,342 ಭೂ ಪರಿಹಾರ ಮತ್ತು ಮರಮಾಲ್ಕಿ ಪರಿಹಾರವನ್ನು ವಿತರಣೆ ಮಾಡಲಾಗಿದೆ ಎಂದರು. ಪ್ರಾಧಿಕಾರದ ಅಗತ್ಯ ಪ್ರಮಾಣದಲ್ಲಿ ಹಣಕಾಸು ಲಭ್ಯವಿದೆ. ರೈತರು ಯಾವುದೇ ಕಾರಣಕ್ಕೂ ವದಂತಿಗಳಿಗೆ ಕಿವಿಗೊಡಬಾರದು. ನಿಗದಿತ ಸಮಯದಲ್ಲಿ ಭೂಸ್ವಾಧೀನಕ್ಕೆ ಒಪ್ಪಿಗೆ ಸೂಚಿಸುವ ಎಲ್ಲರಿಗೂ ಪರಿಹಾರ ಮೊತ್ತವನ್ನು ಒಂದೇ ಕಂತಿನಲ್ಲಿ ವಿತರಣೆ ಮಾಡುತ್ತೇವೆ. ಪರಿಹಾರ ವಿತರಣೆ ಸಂಬಂಧ ಜಾಲತಾಣಗಳಲ್ಲಿ ಜಿಡಿಎಸ್ ಪಕ್ಷದವರು ಮಾಡುತ್ತಿರುವ ಅಪಪ್ರಚಾರಗಳನ್ನು ನಂಬದಿರಿ. ರೈತರು ಭೂ ಪರಿಹಾರಕ್ಕೆ ಬಿದಲು ಭೂ ಪಾಲುದಾರಿಕೆ ಪಡೆಯುವುದು ಉತ್ತಮ ನಿರ್ಧಾರ. ಭವಿಷ್ಯದಲ್ಲಿ ನಿಮ್ಮ ಉಳಿದ ಭೂಮಿಯ ಬೆಲೆ 10 ಪಟ್ಟು ಹೆಚ್ಚಾಗಲಿದೆ ಎಂದರು.

ಕಳೆದ ವಾರ ಮಾಗಡಿ ಶಾಸಕ ಎಚ್.ಸಿ.ಬಾಲಕೃಷ್ಣ ಅವರು ರಾಮನಗರದಲ್ಲಿರುವ ಜಿಬಿಡಿಎ ಕಚೇರಿಯಲ್ಲಿ ಸಾಂಕೇತಿಕವಾಗಿ ರೈತರಿಗೆ ಪರಿಹಾರ ಚೆಕ್ ವಿತರಣೆ ಮಾಡಿದ್ದರು. ಅಂದು ಏಳು ಮಂದಿ ರೈತರ ಮಾಲೀಕತ್ವದ ಒಟ್ಟು 2 ಎಕರೆ 9 ಗುಂಟೆ ಜಮೀನಿಗೆ ಭೂ ಪರಿಹಾರವಾಗಿ ರೂ. 4,14,60000, (ಒಂದು ಗುಂಟೆಗೆ ರೂ.5,18,250) ಇಡಗಂಡು 5 ಲಕ್ಷ ಹಾಗೂ ಮರ ಮಾಲ್ಕಿ ಸೇರಿ ಒಟ್ಟು ರೂ.5,23,70,18 ಪರಿಹಾರ

ಸಾಮಾಜಿಕ ಜಾಲತಾಣದಲ್ಲಿ ಅಪಪ್ರಚಾರ ಮಾಡುವವರ ವಿರುದ್ಧ ದೂರು

ರಾಮನಗರ : ಜಿಬಿಡಿಎ ನೀಡಿದ ಭೂಸ್ವಾಧೀನ ಪರಿಹಾರದ ಚೆಕ್ ಅನ್ನು ಸುಳ್ಳು ಎಂದು ಕೆಲವರು ಅಪಪ್ರಚಾರ ಮಾಡುತ್ತಿದ್ದಾರೆ. ರೈತ ಹೋರಾಟಗಾರರೆಂದು ಪ್ರತಿಭಟನೆ ನಡೆಸುತ್ತಿರುವ ಕೆಲವರು ಹಾಗೂ ಜೆಡಿಎಸ್ ಅಧಿಕೃತ ಸಾಮಾಜಿಕ ಜಾಲತಾಣದಲ್ಲಿ ಸುಳ್ಳು ಸುದ್ದಿಗಳನ್ನು ಹಾಕಿ ಜನರನ್ನು ದಾರಿತಪ್ಪಿಸುತ್ತಿರುವುದಾಗಿ ಜಿಬಿಡಿಎ ಅಧ್ಯಕ್ಷ ಗಾಣಕಲ್ ನಟರಾಜ್ ಆಕ್ರೋಶ ವ್ಯಕ್ತಪಡಿಸಿದರು.

ಜೂ.19ರಂದು ಚೆಕ್ ವಿತರಣೆ ಮಾಡಲಾಗಿದ್ದು, ಆದರೆ ತಾಂತ್ರಿಕತೆ ಬಳಸಿ ದಿನಾಂಕವನ್ನು 19.06.2024 ತಿದ್ದಲಾಗಿದೆ. ಇಂತಹ ಕೀಳುಮಟ್ಟದ ಅಪಪ್ರಚಾರ ಮಾಡುತ್ತಿರುವ ಮಟ್ಟಕ್ಕೆ ಯಾರೂ ಇಳಿಯಬಾರದು. ನಾಯಕರು ಜನರಿಗೆ ಉತ್ತಮ ಸಂದೇಶ ನೀಡಬೇಕು. ಜೆಡಿಎಸ್‌ನ ಪಕ್ಷದ ನಾಯಕರು ಪ್ರಧಾನ ಮಂತ್ರಿ, ಮುಖ್ಯಮಂತ್ರಿ ಸ್ಥಾನಗಳನ್ನು ಅಲಂಕರಿಸಿದ್ದಾರೆ. ಇಂತಹ ಪಕ್ಷದ ಅಧಿಕೃತ ಪೇಜ್‌ನಲ್ಲಿ ಈ ರೀತಿ ಸುಳ್ಳು ಅಪಪ್ರಚಾರ ಮಾಡುತ್ತಿರುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.

ಈ ವಿರುದ್ಧವಾಗಿ ರಾಮನಗರ ಪೊಲೀಸ್ ಕೈಪಿ ವಿಭಾಗ ಹಾಗೂ ಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿ, ಈ ಪೋಸ್ಟ್ ಮಾಡಿರುವವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಲಾಗಿದೆ ಎಂದರು.

ಜೂ.28ರಿಂದ ಹೋಲಿಯೋ ಲಸಿಕೆ ಕಾರ್ಯಕ್ರಮ

ಕೊರಟಗೆರೆ ತಾಲೂಕಿನ 142ಆರೋಗ್ಯ ಕೇಂದ್ರದಲ್ಲಿ ಜೂ.28ರಿಂದ ಜು.1ರತನಕ ಪಲ್ಸ್‌ಹೋಲಿಯೋ ಲಸಿಕೆ ಕಾರ್ಯಕ್ರಮ ನಡೆಯಲಿದೆ. ಹೋಷಕರು ತಪ್ಪದೇ ತಮ್ಮ ಮಕ್ಕಳಿಗೆ ಹೊಲಿಯೋ ಲಸಿಕೆ ಹಾಕಿಸಿಕೊಳ್ಳಬೇಕಿದೆ ತಹಶೀಲ್ದಾರ್ ಮಂಜುನಾಥ.ಕೆ ತಿಳಿಸಿದರು.

ಕೊರಟಗೆರೆ ಪಟ್ಟಣದ ವಿನಿಯಿಧಾನಸೌಧ ಸಭಾಂಗಣದಲ್ಲಿ ಇತ್ತೀಚೆಗೆ ಏರ್ಪಡಿಸಲಾಗಿದ್ದ ಹೋಲಿಯೋ ದಿನದ ವಿಶೇಷ ಅಧಿಕಾರಿಗಳ ಸಭೆಯನ್ನು ಉದ್ಘೇಶಿಸಿ ಮಾತನಾಡಿದರು.

ರಾಜ್ಯ ಸರಕಾರದ ಆದೇಶದಂತೆ ಹುಟ್ಟಿದ ದಿನದ ಮಗುವಿನಿಂದ ಹಿಡಿದು ಜೂ.28ರಿಂದ ಜು.1ರತನಕ ಗ್ರಾಮೀಣದಲ್ಲಿ 142ಕೇಂದ್ರ ಮತ್ತು ಪಟ್ಟಣದ 15ವಾರ್ಡಿನಲ್ಲಿ ಪಲ್ಸ್ ಹೋಲಿಯೋ ಕಾರ್ಯಕ್ರಮ ನಡೆಯಲಿದೆ. ಉಳಿದಂತೆ ಸಾರ್ವಜನಿಕ ಪ್ರದೇಶಗಳಾದ ಬಸ್‌ನಿಲ್ದಾಣ, ಗೊರವನಹಳ್ಳಿ ದೇವಾಲಯ, ಹೊಬಳಿ ಕೇಂದ್ರಗಳಲ್ಲಿಯೂ ಸಹ ಲಸಿಕೆ ಕಾರ್ಯಕ್ರಮ ನಡೆಯಲಿದೆ ಎಂದರು.

ಮಕ್ಕಳ ಭವಿಷ್ಯಕ್ಕಾಗಿ ಲಸಿಕೆಯಿಂದ ಯಾರು ಸಹ ವಂಚಿತರಾಗದೇ ಆರೋಗ್ಯ ಇಲಾಖೆಗೆ ಸಹಕಾರ ನೀಡಬೇಕಿದೆ. ಇದಾದ ನಂತರವು ಸಹ ಎರಡು ದಿನಗಳ ಕಾಲ ಮನೆಮನೆಗೆ ಲಸಿಕೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಎಂದರು.

ವಿಶೇಷ ಸಭೆಯಲ್ಲಿ ತಾಪಂ ಇಒ ಅಪೂರ್ವ, ತಾಲೂಕು ಆರೋಗ್ಯಾಧಿಕಾರಿ ಡಾ.ಚೈತ್ರಾರೆಡ್ಡಿ, ಪಪಂ ಸಿಇಒ ಉಮೇಶ್, ಶಿಕ್ಷಣ, ಸಮಾಜ ಕಲ್ಯಾಣ ಮತ್ತು ಆರೋಗ್ಯ ಇಲಾಖೆ ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ನೀರಿನ ಬಕೆಟ್‌ಗೆ ಬಿದ್ದು ಎರಡು ವರ್ಷದ ಮಗು ಸಾವು

ಆನೇಕಲ್ : ಆಟವಾಡುತ್ತಿದ್ದ ವೇಳೆ ನೀರಿನ ಬಕೆಟ್‌ಗೆ ಬಿದ್ದಿದ್ದ ಎರಡು ವರ್ಷದ ಮಗು ಚಿಕಿತ್ಸೆ ಫಲಿಸದೆ ಮೃತಪಟ್ಟಿರುವ ದುರ್ಘಟನೆ ಆನೇಕಲ್ ತಾಲ್ಲೂಕಿನ ಹೀಲಲಿಗೆಯಲ್ಲಿ ನಡೆದಿದೆ.

ಮೃತ ಮಗುವನ್ನು ರಿಯಾಂಶ್ (2) ಎಂದು ಗುರುತಿಸಲಾಗಿದೆ. ಬಿಹಾರ ಮೂಲದ ಹೀರಾ ರಾಮ್ ಹಾಗೂ ಅರ್ಚನಾ ದಂಪತಿಯ ಪುತ್ರನಾಗಿದ್ದ ರಿಯಾಂಶ್, ಹೀಲಲಿಗೆಯ ರಾಮ ದೇವಾಲಯದ ಸಮೀಪ ಕುಟುಂಬದೊಂದಿಗೆ ವಾಸವಾಗಿದ್ದನು.

ಜೂನ್ 23ರಂದು ಮನೆಯಲ್ಲಿ ಆಟವಾಡುತ್ತಿದ್ದ ವೇಳೆ ಆಕಸ್ಮಿಕವಾಗಿ ನೀರಿನ ಬಕೆಟ್‌ಗೆ ಬಿದ್ದಿದ್ದಾನೆ. ಕೂಡಲೇ ಕುಟುಂಬಸ್ಥರು ಮಗುವನ್ನು ಬೆಂಗಳೂರಿನ ಆಕೃರ್ತ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದ್ದರು.

ಆದರೆ ಮೂರು ದಿನಗಳಿಂದ ಚಿಕಿತ್ಸೆ ಪಡೆಯುತ್ತಿದ್ದ ರಿಯಾಂಶ್ ಶುಕ್ರವಾರ ಚಿಕಿತ್ಸೆ ಫಲಿಸದೆ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾನೆ.

ಘಟನೆ ಕುರಿತು ಸೂರ್ಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು

ಮಗುವಿನ ಅಕಾಲಿಕ ಸಾವಿನಿಂದ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದ್ದು, ಹೀಲಲಿಗೆ ಪ್ರದೇಶದಲ್ಲಿ ಶೋಕದ ವಾತಾವರಣ ನಿರ್ಮಾಣವಾಗಿದೆ.

ಅಭಿವೃದ್ಧಿ ಕಾಮಗಾರಿಗೆ ಶಾಸಕ ಬಿ.ಶಿವಣ್ಣರಿಂದ ಭೂಮಿ ಪೂಜೆ

ಹೆಬ್ಬಗೋಡಿ (ಆನೇಕಲ್) : ಸಮೀಪದ ಹುಸ್ಕೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚೊಕ್ಕಸಂದ್ರ ಗ್ರಾಮದ ಮುಖ್ಯ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಬಿ.ಶಿವಣ್ಣ ಬುಧವಾರ ಭೂಮಿ ಪೂಜೆ ನೆರವೇರಿಸಿದರು.

ಶಾಸಕ ಬಿ.ಶಿವಣ್ಣ ಮಾತನಾಡಿ ಆನೇಕಲ್ ತಾಲ್ಲೂಕಿನ ಪ್ರತಿ ಮುಖ್ಯ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು ಕ್ರಿಯಾ ಯೋಜನೆ ರೂಪಿಸಲಾಗಿದೆ. ಮಳೆಯ ಕಾರಣದಿಂದಾಗಿ ಹಲವೆಡೆ ರಸ್ತೆ ಗುಂಡಿಗಳು ಬಿದ್ದಿವೆ. ಹಂತ ಹಂತವಾಗಿ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು ಕ್ರಮ ವಹಿಸಲಾಗುತ್ತಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸೇರಿದಂತೆ ವಿವಿಧ ಇಲಾಖೆಗಳ ಅನುದಾನಗಳನ್ನು ಕ್ರೋಢೀಕರಿಸಿ ರಸ್ತೆಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ ಎಂದರು. ಹುಸ್ಕೂರು ಭಾಗದಲ್ಲಿ ಇತ್ತೀಚಿನ ದಿನಗಳಲ್ಲಿ ವಾಹನ ದಟ್ಟಣೆ ಹೆಚ್ಚಾಗುತ್ತಿದೆ. ಹಾಗಾಗಿ ಆನೇಕಲ್ ತಾಲ್ಲೂಕಿಗೆ

ಸಂಚಾರಿ ಪೊಲೀಸ್ ಠಾಣೆ ವ್ಯವಸ್ಥೆ ಮಾಡಲು ಗೃಹ ಸಚಿವರಿಗೆ ಮನವಿ ಸಲ್ಲಿಸಲಾಗುವುದು. ಹುಸ್ಕೂರು ಹಣ್ಣು ಮಾರುಕಟ್ಟೆ ಬಳಿ ಪೊಲೀಸ್ ಚೌಕಿ ಸ್ಥಾಪಿಸುವಂತೆ ಆಗ್ರಹಿಸಲಾಗುವುದು ಎಂದರು.

ಮುಖಂಡರಾದ ಚಿಂತಲ ಮಡಿವಾಳ ಶಿವರಾಮು, ಚೊಕ್ಕಸಂದ್ರ ಬಾಬು, ವೇಣು, ಯಲ್ಲಪ್ಪ, ವೆಂಕಟೇಶ್, ಶ್ರೀನಿವಾಸ್, ರಮೇಶ್ ಇದ್ದರು.

ಈಗಾಗಲೇ ಶುಲ್ಕ ಪಾವತಿಸಿ ಬಸ್ ಪಾಸ್ ಪಡೆದಿದ್ದ ವಿದ್ಯಾರ್ಥಿಗಳಿಗೆ ಶುಲ್ಕ ಮರು ಪಾವತಿ

ತುಮಕೂರು: ರಾಜ್ಯ ಸರ್ಕಾರವು ಶಾಲಾ–ಕಾಲೇಜುಗಳ ಎಲ್ಲ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ವಿತರಿಸಲು ಹಾಗೂ ಈಗಾಗಲೇ ಶುಲ್ಕ ಪಾವತಿಸಿಕೊಂಡು ವಿತರಿಸಿರುವ ಬಸ್‌ಪಾಸ್ ಮೊತ್ತವನ್ನು ಮರು ಪಾವತಿಸಲು ಅನುಮೋದಿಸಿರುವ ಹಿನ್ನಲೆಯಲ್ಲಿ ಜೂನ್ 29 ರಿಂದ ಸೇವಾಸಿಂಧು ಪೋರ್ಟಲ್ ಮೂಲಕ ಶುಲ್ಕ ಪಾವತಿಸಿ ಬಸ್ ಪಾಸುಗಳನ್ನು ಪಡೆದಿರುವ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ ಸೌಲಭ್ಯ ಕಲ್ಪಿಸಲಾಗುವುದು.

ವಿದ್ಯಾರ್ಥಿಗಳು https://sevasindhuservices.karnataka.gov.in/buspassservices/ ಪೋರ್ಟಲ್ ಮೂಲಕ ಮೊಬೈಲ್ ಸಂಖ್ಯೆ/ಒಟಿಪಿಸಿ ನಮೂದಿಸಿ ವಿದ್ಯಾರ್ಥಿಗಳ ಆಧಾರ್ ಇ–ಕೆವೈಸಿ ಪೂರಣಗೊಳಿಸಿ ತಮ್ಮ ಅಥವಾ ತಮ್ಮ ಪೋಷಕರ ಬ್ಯಾಂಕ್ ಖಾತೆ ವಿವರಗಳನ್ನು ತಂತ್ರಾಂಶದಲ್ಲಿ ನಮೂದಿಸುವ ಮೂಲಕ ಅರ್ಜಿ ಸಲ್ಲಿಸಬೇಕು. ಅರ್ಜಿ ಸಲ್ಲಿಸಿದ 7 ದಿನಗಳ ಒಳಗೆ ವಿದ್ಯಾರ್ಥಿಗಳು ನೀಡಿದ ಬ್ಯಾಂಕ್ ಖಾತೆಗೆ ಓಇಇಬಿ/ಖಖಿಬಿಯಿಂದ ಮೂಲಕ ಪಾಸ್ ಮೊತ್ತ ಮರುಪಾವತಿಯಾಗುತ್ತದೆ ಹಾಗೂ ಈ ಬಗ್ಗೆ ವಿದ್ಯಾರ್ಥಿಗಳು ನೀಡಿರುವ ಮೊಬೈಲ್ ಸಂಖ್ಯೆಗೆ ಎಸ್‌ಎಂಎಸ್ ರವಾನೆಯಾಗುತ್ತದೆ. ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ ನಂತರ ಬಸ್ ಪಾಸಿನ ಶುಲ್ಕ ನೇರವಾಗಿ ಬ್ಯಾಂಕ್ ಖಾತೆಗೆ ಆನ್‌ಲೈನ್ ಮೂಲಕ ಜಮೆಯಾಗುವುದರಿಂದ ಈ ಸಂಬಂಧ ವಿದ್ಯಾರ್ಥಿಗಳು ಯಾವುದೇ ಕಚೇರಿ/ಕೌಂಟರ್‌ಗಳಿಗೆ ಭೇಟಿ ನೀಡುವ ಅವಶ್ಯಕತೆ ಇರುವುದಿಲ್ಲ ಎಂದು ತುಮಕೂರು ವಿಭಾಗೀಯ ನಿಯಂತ್ರಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುರಕ್ಷಿತ ಮಾನದಂಡ ಅನುಸರಿಸದ ಬಸ್ ವಿರುದ್ಧ ಕ್ರಮ

ಮೋಟಾರ್ ವಾಹನ ನಿರೀಕ್ಷಕರಾದ ಸದ್ರುಲ್ಲಾ ಷರೀಫ್ ತಂಡದಿಂದ ಕಾರ್ಯಾಚರಣೆ

ತುಮಕೂರು: ಬೆಂಗಳೂರಿನಿಂದ ಯಾದಗಿರಿ, ಕೆಂಭಾವಿ, ತೇರದಾಳ ಕಡೆಗೆ ಸಂಚಾರ ಮಾಡುತ್ತಿದ್ದ ನಾಲ್ಕು ಸ್ಲೀಪರ್ ಬಸ್‌ಗಳನ್ನು ಅಪರ ಸಾರಿಗೆ ಆಯುಕ್ತರಾದ ಪಿಂಕಾರೇಶ್ವರಿ ರವರ ಆದೇಶದ ಮೇರೆಗೆ ವಿಶೇಷ ಕಾರ್ಯಾಚರಣೆಯನ್ನು ತುಮಕೂರು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ ಸಾರಿಗೆ ನಿಯಮಗಳನ್ನು ಪಾಲಿಸದೇ ಪ್ರಯಾಣಿಸುತ್ತಿದ್ದ ಬಸ್‌ಗಳನ್ನು ಪರಿಶೀಲನೆ ನಡೆಸಿದರು.

ಜೂ. 24 ರ ಮಧ್ಯರಾತ್ರಿ ಅನಧಿಕೃತವಾಗಿ ರಹದಾರಿ ಸುರಕ್ಷಿತ ಮಾನದಂಡಗಳನ್ನು ಉಲ್ಲಂಘಿಸಿ ಬಸ್ಸಿನ ಟಾಪ್ ಮೇಲೆ ಪ್ರಯಾಣಿಕರಿಗೆ ಸಂಬಂಧಿಸದೇ ಇರುವ ಲಗೇಜುಗಳು, ರಬ್ಬರ ಟೈರ್‌ಗಳು, ಭಾರಿ ಪ್ರಮಾಣದ ಗುಜರಿ ಬಟ್ಟೆಗಳು ಪ್ಲಾಸ್ಟಿಕ್ ಮತ್ತು ಫೈಬರ್ ವಸ್ತುಗಳನ್ನು ಪ್ರಯಾಣಿಕರ ಸುರಕ್ಷತಾ ದೃಷ್ಟಿಯಿಂದ ಪ್ರಾದೇಶಿಕ ಸಾರಿಗೆ ಕಚೇರಿ ಆವರಣದಲ್ಲಿ ಸುರಕ್ಷಿತವಾಗಿ ಆಫ್ ಲೋಡ್ ಅಂದರೆ ಕೆಳಗಿಳಿಸಿ ವಾಹನಗಳ ವಿರುದ್ಧ ತನಿಖಾ ವರದಿಯನ್ನು ನೀಡಿ ಮುಂದಿನ ಕ್ರಮಕ್ಕೆ ಶಿಫಾರಸ್ಸು ಮಾಡಿ ಪ್ರಯಾಣಿಕರ ಸಂಚಾರ ಮಾಡಲು ವಾಹನಗಳನ್ನು

ಬಿಡುಗಡೆ ಮಾಡಿರುತ್ತಾರೆ.

ರಾಜ್ಯ ಹೆದ್ದಾರಿಗಳಲ್ಲಿ ರಾತ್ರಿವೇಳೆ, ಸಂಚಾರ ಮಾಡುವಂತಹ ಸ್ಲೀಪರ್ ಬಸ್‌ಗಳು ಭಾರಿ ಪ್ರಮಾಣದ ವಸ್ತು, ಸಾಮಗ್ರಿಗಳನ್ನು ತುಂಬಿಕೊಂಡು ಸಂಚಾರ ಮಾಡುತ್ತಿರುವುದರಿಂದ ಅಪಘಾತ, ಬೆಂಕಿ ಹೊತ್ತಿ ಉರಿಯುವುದು ಸೇರಿದಂತೆ ಅನೇಕ ಅವಘಡಗಳು ಸಂಭವಿಸುವುದನ್ನು ಗಮನಿಸಿ ಸಾರಿಗೆ ಇಲಾಖೆ ಭಾರಿ ಸಾಮಗ್ರಿಗಳನ್ನು ತುಂಬಿಕೊಂಡು ಹೋಗುತ್ತಿರುವ ಬಸ್‌ಗಳ ವಿರುದ್ಧ ಕ್ರಮ ಹಾಗೂ ಅರಿವು ಮೂಡಿಸುವುದು

ಮತ್ತು ಸುರಕ್ಷಿತ ಮಾನದಂಡಗಳನ್ನು ಉಲ್ಲಂಘಿಸಿ ಸಂಚಾರ ಮಾಡುತ್ತಿದ್ದ ಬಸ್‌ಗಳ ಮೇಲೆ ಕ್ರಮ ಕೈಗೊಂಡಿದ್ದಾರೆ.

ಕಾರ್ಯಾಚರಣೆಯಲ್ಲಿ ಹಿರಿಯ ಮೋಟಾರ್ ವಾಹನ ನಿರೀಕ್ಷಕರಾದ ಸದ್ರುಲ್ಲಾ ಷರೀಫ್, ಕಚೇರಿಯ ಸಿಬ್ಬಂಧಿಗಳು ಹಾಜರಿದ್ದರು.

ಅರಣ್ಯ ಪ್ರದೇಶದಲ್ಲಿ ನಾಲ್ಕು ಕಾಡಾನೆ ಪ್ರತ್ಯಕ್ಷ: ಸ್ಥಳೀಯರಲ್ಲಿ ಆತಂಕ

ಆನೇಕಲ್ : ಪಟ್ಟಣಕ್ಕೆ ಸಮೀಪದ ಮುತ್ಯಾಲಮಡುವು ಅರಣ್ಯ ಪ್ರದೇಶದಲ್ಲಿ ನಾಲ್ಕು ಕಾಡಾನೆಗಳು ಕಂಡುಬಂದಿದ್ದು ಸ್ಥಳೀಯರಲ್ಲಿ ಆತಂಕ ಮೂಡಿಸಿದೆ.

ಆಹಾರ ಅರಸಿ ಕಾಡಿನಿಂದ ನಾಡಿಗೆ ಬಂದ ನಾಲ್ಕು ಕಾಡಾನೆಗಳು ಮುತ್ಯಾಲಮಡುವ ಸುತ್ತಮುತ್ತ ಓಡಾಡುತ್ತಿದೆ. ಮುತ್ಯಾಲಮಡುಗು ಅರಣ್ಯ ಪ್ರದೇಶದ ಅಚ್ಚೆ ಹಸಿರಿನ ನಡುವೆ ಕಾಡಾನೆಗಳು ತಾವು ನಡೆದಿದ್ದೇ ದಾರಿಯಂತೆ ಓಡಾಡುತ್ತಿರುವುದು ವಿಡಿಯೋಗಳಲ್ಲಿ ಸೆರೆಯಾಗಿದೆ.

ಆನೇಕಲ್ ತಾಲೂಕು ಕಾಡಂಚಿನ ಗ್ರಾಮಗಳಲ್ಲಿ ಕಳೆದ ಮೂರು ನಾಲ್ಕು ತಿಂಗಳುಗಳಿಂದ ಕಾಡಾನೆಗಳು ನಿರಂತರವಾಗಿ ಓಡಾಡುತ್ತಿವೆ. ಕಾಡಾನೆಗಳನ್ನು ಕಾಡಿನತ್ತ ಓಡಿಸಲು ಅರಣ್ಯ ಇಲಾಖೆ ಅರಸಾಹಸ ಪಡುತ್ತಿದೆ. ಅರಣ್ಯ ಇಲಾಖೆಯ ಸಿಬ್ಬಂದಿ ಹಗಲು ರಾತ್ರಿ ಎನ್ನದೆ ಪಟಾಕಿಗಳನ್ನು ಸಿಡಿಸಿ ಆನೆಗಳು ನಾಡಿನತ್ತ ಬಾರದಂತೆ ಶ್ರಮವಹಿಸುತ್ತಿದೆ.

ಕಾಡಾನೆಗಳ ದೃಶ್ಯವನ್ನು ಡ್ರೋನ್ ನಲ್ಲಿ ಚಿತ್ರಿಕರಿಸಿದ ಆನೇಕಲ್ಲು ಛಾಯಾಗ್ರಾಹಕ ಪ್ರಶಾಂತ್ ರೆಡ್ಡಿ ಸೂರ್ಯ ಪ್ರಗತಿ ಪತ್ರಿಕೆಯೊಂದಿಗೆ ಮಾತನಾಡಿ ಮುತ್ಯಾಲಮಡುಗು ಅರಣ್ಯ ಪ್ರದೇಶ ಅಚ್ಚ ಹಸಿರಿನಿಂದ ಕೂಡಿದ್ದು ಡ್ರೋನ್ ಮೂಲಕ ಅರಣ್ಯದ ಸೊಬಗನ್ನು ಸೆರೆಹಿಡಿಯುತ್ತಿದ್ದಾಗ ಆಕಸ್ಮಿಕವಾಗಿ ಕಾಡಾನೆಗಳು ಕಂಡುಬಂದಿತು. ಕಾಡಾನೆಗಳು ಅತ್ತಿಂದಿತ್ತ ರಾಜಗಾಂಭೀರ್ಯದಿಂದ ಓಡಾಡುತ್ತಿದ್ದ ದೃಶ್ಯಗಳು ಕ್ಯಾಮೆರಾದಲ್ಲಿ ಸೆರೆಯಾಗಿವೆ ಎಂದರು.

ಆನೇಕಲ್‌ನಲ್ಲಿ ಶ್ರೀ ಕೃಷ್ಣೋಪದೇಶ ನಾಟಕ ಪುದರ್ಶನ

ಆನೇಕಲ್: ಪಟ್ಟಣದಲ್ಲಿ ಲಕ್ಷ್ಮೀನರಸಿಂಹಸ್ವಾಮಿ ಕೃಪಾ ಪೋಷಿತ ನಾಟಕ ಮಂಡಳಿ, ಶ್ರೀಧರ್ ರಂಭೂಮಿ ಕಲಾವಿದರ ಬಳಗದ ವತಿಯಿಂದ ಶ್ರೀ ಕೃಷ್ಣೋಪದೇಶ ನಾಟಕ ಪುದರ್ಶನವನ್ನು ಆಯೋಜಿಸಲಾಗಿತ್ತು. ಕಲಾವಿದರು ಆಕರ್ಷಕ ನಾಟಕ ಪ್ರದರ್ಶನ ನೀಡಿದರು.

ನಾಟಕ ಪ್ರದರ್ಶನದ ಪುಯುಕ್ತ ಹಿರಿಯ ರಂಗಭೂಮಿ ಕಲಾವಿದರು ಮತ್ತು ಸಾಂಸ್ಕೃತಿಕ ಕ್ಷೇತ್ರಕ್ಕೆ ಕೊಡುಗೆ ನೀಡಿದ 20ಕ್ಕೂ ಹೆಚ್ಚು ಸಾಧಕರನ್ನು ಸನ್ಮಾನಿಸಲಾಯಿತು. ಡಾ.ಎಂ.ಶ್ರೀನಿವಾಸಾಚಾರಿ ಅವರ ನಿರ್ದೇಶನದಲ್ಲಿ ಶ್ರೀ ಕೃಷ್ಣೋಪದೇಶ ನಾಟಕ ಪುದರ್ಶನ: ನಡೆಯಿತು. ನಾಟಕಕ್ಕೆ ಪ್ರೇಕ್ಷಕರು ಚಪ್ಪಾಳೆ, ಶಿಳ್ಳೆ ಹಾಕಿ ಪ್ರೋತ್ಸಾಹ ನೀಡಿದರು

ಜಿಗಣಿಯ ಶ್ರೀಧರ್ ಶ್ರೀಕೃಷ್ಣನಾಗಿ, ಕರ್ಣನಾಗಿ

ತ್ಯಾಗ, ಬಲಿದಾನ, ಭಾವೈಕ್ಯ ಸಂಕೇತವೇ : ಮೊಹರಂ ದಿನಾಚರಣೆ

ಇಸ್ಲಾಂ ಶಾಂತಿ, ಸಹನೆ, ಸಹೃದಯತೆ, ಸೌಹಾರ್ದತೆ ಮತ್ತು ಪರಧರ್ಮ ಸಹಿಷ್ಣುತೆಯ ಧರ್ಮವಾಗಿದೆ. ಪ್ರವಾದಿ ಮಹಮ್ಮದ್ ಪೈಗಂಬರ್ ಅವರ ಪುತ್ರಿ ಬಿಬಿ ಫಾತಿಮಾ–ಹಜರತ್ ಅಲಿ ದಂಪತಿಗೆ ಇಬ್ಬರು ಪುತ್ರರು. ಒಬ್ಬರು ಇಮಾಮಹಸನ್ ಮತ್ತೊಬ್ಬರು ಇಮಾಮಹಸೇನ್. ಈ ಪೈಕಿ ಇಮಾಮಹಸೇನ್ ಅವರು ಪೈಗಂಬರ್‌ರ ತತ್ವಾದರ್ಶಗಳನ್ನು ಪಾಲಿಸುತ್ತಾ ಬದುಕಿನಲ್ಲಿ ಮುನ್ನಡೆಯುತ್ತಾರೆ.

ಸತ್ಯ, ನಿಷ್ಠೆಯ ಹಾದಿಯಲ್ಲಿ ಸಾಗುತ್ತಾ, ಇಸ್ಲಾಂ ಧರ್ಮ ಪ್ರಸಾರ ಮಾಡುತ್ತಾರೆ ಪೈಗಂಬರರು ಅಮರವಾದ ನಂತರ ನಾಲ್ಕನೇ ಖಲೀಫ್‌ರಾದವರು ಆಳಿಯ ಹಜರತ್ ಅಲಿ. ಇವರ ನಂತರ ಆ ಸ್ಥಾನಕ್ಕೆ ಏರಬೇಕಿದ್ದವರೇ ಇಮಾಮಹುಸೇನ್, ಆಗ ಅರಬ್ ರಾಜನಾಗಿದ್ದ ಯಜೀದ್ ಮಧ್ಯೆ ಪ್ರವೇಶಿಸುತ್ತಾನೆ. ಅಧಿಕಾರದ ಆಸೆಗಾಗಿ ಇಸ್ಲಾಂ ಧರ್ಮದ ತತ್ವಗಳನ್ನೇ ತನಗೆ ಹೊಂದಾಣಿಕೆಯಾಗುವಂತೆ ಮಾರ್ಪಡಿಸಲು ಪ್ರಯತ್ನಿಸುತ್ತಾನೆ.

ಪ್ರವಾದಿ ಮುಹಮ್ಮದ್‌ರವರ ಮೇಲೆ 23 ವರ್ಷಗಳ ಕಾಲ ಅವತೀರ್ಣವಾದ ಗ್ರಂಥವು ಪರಿಪೂರ್ಣಗ್ರಂಥ 'ಪವಿತ್ರಕುರಾನ್'. 'ಪವಿತ್ರ ಕುರಾನ್' ಕೇವಲ ಮುಸ್ಲಾಮರಿಗಾಗಿ ಬಂದಂತಹ ಗ್ರಂಥವಲ್ಲ. ಇದು ಸರ್ವಜನರ ಮಾರ್ಗದರ್ಶನಕ್ಕೆ ಬಂದ ಗ್ರಂಥವಾಗಿದೆ. ಒಬ್ಬ ಮನುಷ್ಯ ತಾನು ಹುಟ್ಟಿದ ದಿನದಿಂದ ಸಾಯುವವರೆಗೂ ಯಾವ ರೀತಿಯ ಕೌಟುಂಬಿಕ ಆರ್ಥಿಕ ಮತ್ತು ಸಾಮಾಜಿಕ ಜೀವನ ನಡೆಸಬೇಕೆಂಬುದರ ಬಗ್ಗೆ ಪವಿತ್ರ ಕುರಾನ್‌ನಲ್ಲಿ ವಿವರಣೆಯಾಗಿದೆ.

ಇಸ್ಲಾಂ ಧರ್ಮದಲ್ಲಿ ರಂಜಾನ್ ಮತ್ತು ಬಕ್ರೀದ್ ಹಬ್ಬ ಅತ್ಯುತ್ತಮ ಆಚರಿಸುವ ಅವಕಾಶವಿದೆ. ಇದರೊಂದಿಗೆ ಕೆಲವು ದಿನಾಚರಣೆಯೂ ಸಹವಿದೆ. ಈದ್‌ಮಿಲಾದ್, ಮೊಹರಂ ದಿನಾಚರಣೆ, ಪ್ರತೀಕವಾಗಿದೆ. ಪ್ರವಾದಿ ಮಹಮ್ಮದ್‌ರವರ ಪುತ್ರಿ"ಬೀಬಿ ಫಾತೀಮರವರ ವಿವಾಹವು ಹಜರತ್ ಅಲೀ ಅವರೊಂದಿಗೆ 25–05–624 ರಂದು ಶುಕ್ರವಾರ ನೆರವೇರಸಲಾಗಿತ್ತು ಅವರ ಮಕ್ಕಳಾದ ಹಜರತ್ ಹಸೇನ್ ಶುಕ್ರವಾರ

ಜನಿಸಿದರು. ಹಜರತ್ ಹುಸೈನ್ ಅವರು ಶುಕ್ರವಾರ ಜನಿಸಿದರು. ಆದ್ದರಿಂದ ಶುಕ್ರವಾರ "ಮೊಹರಂ ತಿಂಗಳ ಇಸ್ಲಾಮಿ ಕ್ಯಾಲೆಂಡರ್‌ನ" ಪ್ರಥಮ ತಿಂಗಳವಾಗಿದೆ.

2026ರ ಮೊಹರಂ ತಿಂಗಳು ಜೂನ್ 16, 2026 ರಂದು ಆರಂಭವಾಗಿದೆ. ಇಸ್ಲಾಮಿಕ್ ಹೊಸ ವರ್ಷದ 10ನೇ ದಿನವಾದ 'ಅಶುರಾ' (೧೧ಗಿಡಿಚಿ), ಪ್ರಮುಖ ಆಚರಣೆಯ ದಿನವಾಗಿದ್ದು, ಇದು ಜೂನ್ 25 ಅಥವಾ ಜೂನ್ 26, 2026 ರಂದು ಆಚರಿಸಲ್ಪಡಲಿದೆ. ನಿಖರವಾದ ದಿನಾಂಕವು ಸ್ಥಳೀಯ ಚಂದ್ರನ ದರ್ಶನದ ಮೇಲೆ ಅವಲಂಬಿತವಾಗಿರುತ್ತದೆ.

ಮೊಹರಂನ ಮಹತ್ವ ಮತ್ತು ಆಚರಣೆಗಳು:

ಪವಿತ್ರ ತಿಂಗಳು: ಮೊಹರಂ ಇಸ್ಲಾಮಿಕ್ ಕ್ಯಾಲೆಂಡರ್‌ನ ಮೊದಲ ಮತ್ತು ಅತಿ ಪವಿತ್ರ ತಿಂಗಳುಗಳಲ್ಲಿ ಒಂದಾಗಿದೆ ಮೊಹರಂ ಇಸ್ಲಾಮಿಕ್ ಕ್ಯಾಲೆಂಡರ್‌ನ ಮೊದಲ ತಿಂಗಳು ಮತ್ತು ಇಸ್ಲಾಂ ಧರ್ಮದ ಅತ್ಯಂತ ಪವಿತ್ರ ದಿನಗಳಲ್ಲಿ ಒಂದಾಗಿದೆ. ಇದು ಪ್ರವಾದಿ ಮುಹಮ್ಮದ್ ಅವರ ಮೊಮ್ಮಗ ಹಜರತ್ ಇಮಾಮ್ ಹುಸೇನ್ ಮತ್ತು ಅವರ ಅನುಯಾಯಿಗಳ ತ್ಯಾಗ, ಬಲಿದಾನದ ನೆನಪಿಗಾಗಿ ಆಚರಿಸಲಾಗುವ ಹಬ್ಬವಾಗಿದೆ

ಅಶುರಾ ದಿನ: ಈ ದಿನದಂದು ಪ್ರವಾದಿ ಮೊಹಮ್ಮದ್ ಅವರ ಮೊಮ್ಮಗ ಇಮಾಮ್ ಹುಸೇನ್ ಮತ್ತು ಅವರ ಅನುಯಾಯಿಗಳು ಕರ್ಬಲಾ ಕದನದಲ್ಲಿ ಹುತಾತ್ಮರಾದರು. ಈ ಮಹಾನ್ ತ್ಯಾಗವನ್ನು ಸ್ಮರಿಸಿ ಮುಸ್ಲಿಮರು ಪ್ರಾರ್ಥನೆ ಮಾಡುತ್ತಾರೆ ಮತ್ತು ಉಪವಾಸ ಆಚರಿಸುತ್ತಾರೆ.

ಅಶೂರಾ ಎಂಬ ಪದವು ಅಶ್‌ರವಿಂದ ಹೊರಟಿದೆ. ಅಶ್‌ರ ಎಂದರೆ 10 ಎಂದರ್ಥ, ಆದ್ದರಿಂದ ಮಹಮ್ಮದ್ 10 ನೇ ತಾರೀಕನ್ನು ಯೌಮುಲ್ ಅಶೂರಾ ಎಂದು ಕರೆಯಲಾಗುತ್ತದೆ. ಈ ದಿನದಂದು ಉಪವಾಸ (ರೋಜಾ) ಆಚರಿಸುವುದು, ದಾನ–ಧರ್ಮ ಮಾಡುವುದು ಮತ್ತು ಪ್ರಾರ್ಥನೆ ಸಲ್ಲಿಸುವುದು ಆ ದಿನಕ್ಕೆ ನೀಡಲಾಗಿರುವ ಮಹತ್ವವು ಹಜರತ್ ಇಮಾಮ್ ಹುಸೈನ್ ಹುತಾತ್ಮರಾದುದಕ್ಕಾಗಿ ಮತ್ತು ಅದರ ಇತಿಹಾಸವು ತುಂಬಾ ಶುರಾತನವಾಗಿದೆ.

ಶಿಯಾ ಮುಸ್ಲಿಮರ ಆಚರಣೆ: ಇಮಾಮ್ ಹುಸೇನ್ ಹುತಾತ್ಮರಾದ ಕರ್ಬಲಾ ಯುದ್ಧದ ನೆನಪಿಗಾಗಿ ಶಿಯಾ ಮುಸಲ್ಮಾನರು ಈ ತಿಂಗಳು ಶೂರ್ಕಿ ದುಃಖವನ್ನು ಆಚರಿಸುತ್ತಾರೆ. ಕಪ್ಪು ಬಟ್ಟೆಗಳನ್ನು ಧರಿಸಿ, ಮೆರವಣಿಗೆಗಳನ್ನು ನಡೆಸುತ್ತಾರೆ.

ಸುನ್ನಿ ಮುಸ್ಲಿಮರ ಆಚರಣೆ: ಸುನ್ನಿ ಮುಸಲ್ಮಾನರು ಈ ದಿನವನ್ನು ಧಾರ್ಮಿಕವಾಗಿ ಉಪವಾಸ ಕೈಗೊಳ್ಳುವ ಮೂಲಕ ಮತ್ತು ಪ್ರವಾದಿ ಮೂಸಾ (ಮೋಸೆಸ್) ಅವರು ಈಜಿಪ್ಟ್‌ನ ಫೇರೋನಿಂದ ಬಿಡುಗಡೆ ಹೊಂದಿದ ದಿನದ ಸಂಭ್ರಮವಾಗಿ ಆಚರಿಸುತ್ತಾರೆ.

ಸಂತಾಪ ಮತ್ತು ದಾನ: ಈ ತಿಂಗಳಲ್ಲಿ ವಿಶೇಷವಾಗಿ ಕರ್ಬಲಾ ದುರಂತವನ್ನು ನೆನಪಿಸಿಕೊಂಡು ಸಂತಾಪ ಸೂಚಿಸಲಾಗುತ್ತದೆ. ಮುಸ್ಲಿಮರು ತಮ್ಮ ನಂಬಿಕೆ ಮತ್ತು ತ್ಯಾಗವನ್ನು ಗೌರವಿಸಿ, ಬಡವರಿಗೆ

ದಾನ–ಧರ್ಮಗಳನ್ನು ಮಾಡುತ್ತಾರೆ.

ಮೆರವಣಿಗೆಗಳು: ಕರ್ನಾಟಕದ ವಿವಿಧ ಭಾಗಗಳಲ್ಲಿ, ವಿಶೇಷವಾಗಿ ಸ್ಥಳೀಯ ಮಸೀದಿಗಳು ಮತ್ತು ದರ್ಗಾಗಳಲ್ಲಿ ಪಂಜಾ ಮೆರವಣಿಗೆಗಳು ಮತ್ತು ವಿಶೇಷ ಧಾರ್ಮಿಕ ಕಾರ್ಯಕ್ರಮಗಳು ನಡೆಯುತ್ತವೆ.

ಕರ್ಬಲಾದ ಯುದ್ಧದಲ್ಲಿ ಮೊಹರಂ ಒಂದರಿಂದ ಪ್ರಾರಂಭಗೊಂಡ ನಂತರ

ಸತತವಾಗಿ ಹತ್ತು ದಿನಗಳವರೆಗೆ ನಡೆಯಿತ್ತು. ಈ ಹತ್ತು ದಿನಗಳಿಗೆ ಆಶುರಾ ಎಂದು ಕರೆಯುತ್ತಾರೆ. ಅನೇಕ ಜನರು ಉಪವಾಸ ವ್ರತ ಆಚರಿಸುತ್ತಾ ವಿಶ್ವ ಶಾಂತಿಗಾಗಿ ವಿಶೇಷ ಪ್ರಾರ್ಥನೆ ಸಲ್ಲಿಸುತ್ತಾರೆ. ಇಸ್ಲಾಮಿ ಸಂವಿಧಾನದ ಮೂಲ ತತ್ವಗಳಿಗೆ ಉಂಟಾಗುವುದನ್ನು ಗ್ರಹಿಸಿದ ಹಜರತ್ ಇಮಾಮ್ ಹುಸೈನ್‌ರು ಒಳತಿನ ಸಂಸ್ಥಾಪನೆ ಮತ್ತು ಕೆಡುಕಿನ ನಿರ್ಮೂಲನೆಯ ತಮ್ಮ ಕರ್ತವ್ಯದಿಂದ ಹಿಂದಿಯಿಡೇ ಅದಕ್ಕಾಗಿ ಹೋರಾಡಿ ಹುತಾತ್ಮರಾದರು. ದಿ: 10–10–680 ರಂದು (ಮೊಹರಂ ದಿನವನ್ನು 10 ರಂದು) ಇರಾಕ್ ದೇಶದ ಕರ್ಬಲಾದಲ್ಲಿ ನಡೆದ ಈ ಧರ್ಮ ಯುದ್ಧದಲ್ಲಿ ಹಜರತ್ ಹುಸೈನ್‌ರವರು ವೀರ ಮರಣ ಹೊಂದಿದರು.

ಲೇಖಕರು:ಎನ್.ಆನಂದ್,
ತುಮಕೂರು
9590578892

ಬೀದಿಬದಿ ವ್ಯಾಪಾರಿಗಳ ಸಂಘಟನೆಗೆ ಚಿದಾನಂದ್ ಸಲಹೆ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಬೀದಿಬದಿ ವ್ಯಾಪಾರಿಗಳು ಸಂಘಟನೆಯೊಂದಿಗೆ ಗುರುತಿಸಿಕೊಂಡು ಸಂಘಟನಾ ಸಾಮರ್ಥ್ಯ ಬೆಳೆಸಿಕೊಳ್ಳಬೇಕು.ವೃತ್ತಿಬದುಕಿನಲ್ಲಿ ಎದುರಾಗುವ ಸಮಸ್ಯೆಗಳನ್ನು ಸಂಘಟನೆಯ ಸಹಕಾರದೊಂದಿಗೆ ಸುಲಭವಾಗಿ ನಿವಾರಿಸಿಕೊಳ್ಳಬಹುದು ಎಂದು ಸ್ಫೂರ್ತಿದೆವಲಪರ್ಸ್‌ನ ವ್ಯವಸ್ಥಾಪಕ ನಿರ್ದೇಶಕಎಸ್.ಪಿ.ಚಿದಾನಂದ್ ಸಲಹೆ ಮಾಡಿದರು.

ಬುಧವಾರ ನಗರದ ಶ್ರಮಜೀವಿ ಬೀದಿಬದಿ ವ್ಯಾಪಾರಿಗಳ ಸಂಘದ ಕಚೇರಿಯಲ್ಲಿ ಸಂಘದ ಸದಸ್ಯರು ಹಾಗೂ ಪದಾಧಿಕಾರಿಗಳಿಗೆ ಗುರುತಿನಚೀಟಿ, ಹೊಣ್ಣುಮಕ್ಕಳಿಗೆ ಸೀರೆ, ಬ್ಯಾಗ್ ವಿತರಿಸಿ ಮಾತನಾಡಿದರು. ಈ ವೇಳೆ ಸಂಘದರಾಜ್ಯ ಪ್ರಧಾನ ಕಾರ್ಯದರ್ಶಿ ರಾಜಣ್ಣ ಅವರ ಜನ್ಮದಿನ ಆಚರಿಸಿಲಾಯಿತು.ಜನ್ಮದಿನದ ಶುಭಾಶಯಕೋರಿದ ಎಸ್.ಪಿ. ಚಿದಾನಂದ್‌ಅವರು ಬೀದಿಬದಿ ವ್ಯಾಪಾರಿಗಳ ಜನ್ಮದಿನವನ್ನು ಸಂಘದ ಮೂಲಕ ಆಚರಿಸಿದರೆ ನಿಮ್ಮೊಂದಿಗೆ ನಾವಿದ್ದೇವೆ ಎಂಬ ಆತ್ಮವಿಶ್ವಾಸವನ್ನು ಅವರಲ್ಲಿತುಂಬಿದಂತೆ

ತಾಗುತ್ತದೆ. ಈ ಸಂಪ್ರದಾಯ ಮುಂದುವರೆಯಲಿ ಎಂದು ಹೇಳಿದರು.ಆರ್ಥಿಕವಾಗಿ ಸಂಕಷ್ಟದಲ್ಲಿರುವ ಬೀದಿಬದಿ ವ್ಯಾಪಾರಿಗಳಿಗೆ ಶಕ್ತಿ ತುಂಬವಂತಹ ಕೆಲಸಗಳಾಗಬೇಕು.ಈ ವಿಚಾರದಲ್ಲಿ ಸರ್ಕಾರದ ಸೌಲಭ್ಯಗಳನ್ನು ಪಡೆಯುವ ಹಾಗೂ ಇನ್ನಿತರ ಕಾರ್ಯಗಳಲ್ಲಿ ತಾವು ಸಂಘದಜೊತೆ ಸದಾಕೈಜೊಡಿಸುವುದಾಗಿ ತಿಳಿಸಿದರು.

ಶ್ರಮಜೀವಿ ಬೀದಿಬದಿ ವ್ಯಾಪಾರಿಗಳ ಸಂಘದರಾಜ್ಯಾಧ್ಯಕ್ಷ ಎಂ.ಗೋಪಿ ಮಾತನಾಡಿ, ಸಂಘ ಬಲಿಷ್ಠವಾಗಿ ಬೆಳೆಯುತ್ತಿದೆ.ರಾಜ್ಯದ ಹಲವು ಜಿಲ್ಲೆಗಳಲ್ಲಿ ಸಂಘದ ಸಮಿತಿಗಳನ್ನು ರಚನೆ ಮಾಡಲಾಗಿದೆ. ಬೀದಿಬದಿ ವ್ಯಾಪಾರಿಗಳ ಶ್ರೇಯೋಭಿವೃದ್ಧಿಗೆ ಸಂಘ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದೆ ಎಂದರು.

ಮಹಿಳಾ ಘಟಕ ರಾಜ್ಯಾಧ್ಯಕ್ಷ ರವ್ಯಾತ್ರಿ ಜಿ, ರಾಜ್ಯಉಪಾಧ್ಯಕ್ಷೆ ಆದಿಲ್ ಬಾಷಾ, ರಾಜ್ಯ ಪ್ರಧಾನ ಕಾರ್ಯದರ್ಶಿ ರಾಜಣ್ಣ, ಸಂಘಟನಾ ಕಾರ್ಯದರ್ಶಿ ಸಿದ್ದು ಗೋಲಿ, ಸಹ ಕಾರ್ಯದರ್ಶಿ ಕೃಷ್ಣ, ಮಖಂಡರಾದಗಂಗಾಧರ್, ಕುಮಾರ್, ಉಪಾಧ್ಯಕ್ಷೆ ಭವ್ಯ, ಸಹ ಕಾರ್ಯದರ್ಶಿ ಶಿವಮ್ಮ, ಮಂಜುಳಾ, ಶ್ರೀನಿವಾಸಮೂರ್ತಿ ಮೊದಲಾದವರು ಭಾಗವಹಿಸಿದ್ದರು.

'ಡೀಸೆಲ್ ಬೆಲೆ ಇಳಿಸಿ, ಲಾರಿ ಮಾಲೀಕರ ಹಿತಕಾಪಾಡಿ' ಕೇಂದ್ರ ಸರ್ಕಾರಕ್ಕೆಜಿಲ್ಲಾ ಲಾರಿ ಮಾಲಿಕರ ಸಂಘದ ಮನವಿ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಹೆಚ್ಚಿಸಿರುವ ಡೀಸೆಲ್ ಬೆಲೆಯನ್ನು ಹಿಂಪಡೆಯಬೇಕು. ಇತ್ತೀಚೆಗಷ್ಟೇ ಡೀಸೆಲ್ ಬೆಲೆ ಏರಿಕೆಯಿಂದ ಸರಕು ಸಾಗಣೆ ವೆಚ್ಚ ಗಣನೀಯವಾಗಿ ಹೆಚ್ಚಾಗಿದೆ. ಆದರೆ ಸರಕು ಸಾಗಣೆ ದರಗಳಲ್ಲಿ ಸಮರ್ಪಕ ಏರಿಕೆ ಇಲ್ಲದ ಕಾರಣ ಲಾರಿ ಮಾಲೀಕರು ನಷ್ಟಅನುಭವಿಸುತ್ತಿದ್ದಾರೆ. ಆದ್ದರಿಂದಡೀಸೆಲ್ ಮೇಲಿನ ಕೇಂದ್ರ ಮತ್ತುರಾಜ್ಯ ತೆರಿಗೆಗಳನ್ನು ಕಡಿಮೆ ಮಾಡಿ ಬೆಲೆ ಇಳಿಸಬೇಕು ಎಂದು ಜಿಲ್ಲಾ ಲಾರಿ ಮಾಲೀಕರು ಸಂಘದ ಪದಾಧಿಕಾರಿಗಳು ಜಿಲ್ಲಾಧಿಕಾರಿಗಳ ಮೂಲಕ ಕೇಂದ್ರ ಸಾರಿಗೆ ಸಚಿವ ನಿತಿಗಿಡ್ಕರಿಅವರಿಗೆ ಮನವಿ ಪತ್ರ ಸಲ್ಲಿಸಿದರು.



ಸಂಘದ ಅಧ್ಯಕ್ಷಟಿ.ಜಿ.ಚನ್ನಬಸವ ಪ್ರಸನ್ನ, ಉಪಾಧ್ಯಕ್ಷಆಶೋಕ್ ಕುಮಾರ್‌ಜೈನ್, ಕಾರ್ಯದರ್ಶಿ ಶೌಕತ್‌ಉಲ್ಲಾಖಾನ್, ಸಹ ಕಾರ್ಯದರ್ಶಿ ಟಿ.ಎಸ್. ನಾಗಭೂಷಣ್‌ಆರಾಧ್ಯ ಖಜಾಂಚಿಟಿ. ಎಸ್. ಸುರೇಶ್ ಹಾಗೂ ಪದಾಧಿಕಾರಿಗಳು, ಹಲವು ಲಾರಿ ಮಾಲೀಕರುಗುರುವಾರಜಿಲ್ಲಾಧಿಕಾರಿ ಶುಭಾಕಲ್ಯಾಣ್ ಅವರನ್ನು ಭೇಟಿ ಮಾಡಿ ಮನವಿ ಪತ್ರ ಸಲ್ಲಿಸಿದರು. ಕೇಂದ್ರ ಸರ್ಕಾರೀಸೆಲ್ ಬೆಲೆ ಏರಿಕೆ ಹಿಂಪಡೆಯಬೇಕು, ಸರಕು ವಾಹನಗಳಿಗೆ ಪೆಟ್ರೋಲ್ ಲೊಕೇಶನ್‌ಟ್ರಾಕಿಂಗ್‌ದಿವೈಸ್ ಕಡ್ಡಾಯಜಾರಿಗೆ ವಿನಾಯಿತಿ ನೀಡಬೇಕು.ನೀಡುವುದು, 6 ತಿಂಗಳ ಇಎಂಐ ಮೊರಟೋರಿಯಂ ಹಾಗೂ ಎಫ್.ಸಿ.ದರವನ್ನುಕಡಿಮೆ ಮಾಡಬೇಕು.ಸಾರಿಗೆ ವಾಹನಗಳಿಗೆ ಸಂಪೂರ್ಣ ಟೋಲ್ ಶುಲ್ಕ ವಿನಾಯಿತಿ ನೀಡಬೇಕುಎಂದು ಮನವಿಪತ್ರದಲ್ಲಿ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕ: 9901010109

"2028ರ ಚುನಾವಣೆಯಲ್ಲಿ ಕುಮಾರಸ್ವಾಮಿ ಮುಖ್ಯಮಂತ್ರಿಗಳಾಗುತ್ತಾರೆ ಅಧ್ಯಕ್ಷ ನಿಂಗಪ್ಪ ವಿಶ್ವಾಸ

ಸೂರ್ಯಪ್ರಗತಿನ್ಯೂಸ್.ಕಾಂ

ತಿಪಟೂರು: ಮುಂಬರುವ 2028ರ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎ ಅಧಿಕಾರಕ್ಕೆ ಬರುವುದು ಕಂಡಿತ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ರವರು ರಾಜ್ಯದ ಮುಂದಿನ ಮುಖ್ಯಮಂತ್ರಿ ಹಾಗುತ್ತಾರೆ ಎಂದು ತುಮಕೂರು ಜಿಲ್ಲಾ ಜೆಡಿಎಸ್ ಅಧ್ಯಕ್ಷ ಎಚ್.ನಿಂಗಪ್ಪ ತಿಳಿಸಿದರು.

ನಗರದ ಸರ್ಕಾರಿ ನೌಕರರ ಸಮುದಾಯ ಭವನ ದಲ್ಲಿ ನಡೆದ ಯುವ ಮುಖಂಡ ತೀರ್ಥಕುಮಾರ್ ಜೆಡಿಎಸ್ ಸೇರ್ಪಡೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದ ದುರಾಡಳಿತದಿಂದ ಜನರು ಬೇಸತ್ತಿದ್ದಾರೆ. ದ್ವಾದೆ. ಭ್ರಷ್ಟಾಚಾರ ಮುಗಿಲು ಮುಟ್ಟಿದೆ. ಅಭಿವೃದ್ಧಿ ಕೆಲಸಗಳು ಸಂಪೂರ್ಣವಾಗಿ ನಿಂತುಹೋಗಿದೆ. ಈಗ ಮುಖ್ಯಮಂತ್ರಿ ಯಾದ ಡಿ.ಕೆ.ಶಿವಕುಮಾರ್‌ಈಗಾಗಲೇ ಗೃಹಲಕ್ಷ್ಮಿ ಯೋಜನೆಯನ್ನು ಪರಾಮರ್ಶೆ ಮಾಡುತ್ತಿದ್ದಾರೆ. ಕೇಂದ್ರದಲ್ಲಿ ಎನ್‌ಡಿಎ ಸರ್ಕಾರ ಉತ್ತಮವಾಗಿ

ಕಾರ್ಯನಿರ್ವಹಿಸುತ್ತಿದ್ದು, ರಾಷ್ಟ್ರೀಯ ಮಟ್ಟದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕೆಲಸಗಳು ಜನರಕಣ್ಣಿಗೆ ಕಾಣುತ್ತಿವೆ. ಹಾಗಾಗಿ ಕಾಂಗ್ರೆಸ್ ಅಧಿಕಾರ ಕಳೆದುಕೊಳ್ಳಲಿದೆ.ಬಿಡಾದಿಯಲ್ಲಿ ಇರುವ ರೈತರು ತಮ್ಮ ಫಲವತ್ತಾದಭೂಮಿಯನ್ನು ಕಳೆದುಕೊಂಡುನಿರುದ್ಯೋಗಿಗಳಾಗಲಿದ್ದಾರೆ. ಅಲ್ಲಿರುವ ಬಹುಸಚ್ಚು ರೈತರು ಸಣ್ಣ–ಸಣ್ಣ ರೈತರಾಗಿದ್ದು ಅರ್ಧ ಅಥವಾ ಒಂದು ಎಕರೆ ಭೂಮಿ ಇರುವವರೇ

ಹೆಚ್ಚಾಗಿದ್ದಾರೆ. ಇವರ ಭೂಮಿ ಯನ್ನು ಕಾಂಗ್ರೆಸ್ ಸರ್ಕಾರ ವಶಪಡಿಸಿಕೊಂಡರೆ ಈ ರೈತರೆಲ್ಲ ಬೀದಿಗೆಬರಲಿದ್ದಾರೆ. ಆರೈತರ ಪರವಾಗಿಕುಮಾರಸ್ವಾಮಿಯವರು ಗಟ್ಟಿಯಾಗಿ ಧ್ವನಿಎತ್ತಿ ನಿಂತಿದ್ದು ರೈತರಿಗೆ ಅನ್ಯಾಯವಾಗಲು ಅವರು ಬಿಡುವುದಿಲ್ಲ. ಯುವ ಮುಖಂಡರಾದ ತೀರ್ಥ ಕುಮಾರ್‌ಸೆಲ್ಲೇಕೆರೆ ರವರು ಪಕ್ಷ ಸೇರ್ಪಡೆಯಾಗಿರುವುದು ಪಕ್ಷಕ್ಕೆ ಹೆಚ್ಚು ಬಲ ತುಂಬಲಿದೆ ಎಂದರು.

ಯುವ ಮುಖಂಡರಾದ ತೀರ್ಥ ಕುಮಾರ್ ನೆಲ್ಲಿಕೆರೆ ಪಕ್ಷ ಸೇರ್ಪಡೆಯಾಗಿ ಮಾತನಾಡಿ, ಮುಂಬರುವ ದಿನಗಳಲ್ಲಿ ಎಚ್.ಡಿ. ಕುಮಾರಸ್ವಾಮಿ ಯವರು ಮುಖ್ಯಮಂತ್ರಿಯಾಗುವ ಮೂಲಕ ಸಂಕಷ್ಟದಲ್ಲಿರುವ ಈನಾಡಿನಸೈತರು, ಮಹಿಳೆಯರು ಹಾಗೂ ಜನಸಾಮಾನ್ಯರ ಕಷ್ಟಸುಖಗಳಿಗೆಗೆ ಸ್ಪಂದಿಸಬೇ ಕೆಂಬ ವಿಕ್ಕೆಕ ಉದ್ದೇಶದಿಂದ ನಾನು ಜೆಡಿಎಸ್ ಪಕ್ಷ ವನ್ನು ಸೇರ್ಪಡೆಯಾಗುತ್ತಿದ್ದೇನೆ ಎಂದರು.

ಜೆಡಿಎಸ್ ಮುಖಂಡರಾದ ಕೆ.ಟಿ. ಶಾಂತಕುಮಾರ್‌ಮಾತ ಮಾತನಾಡಿನಾಡಿ, ನಮ್ಮ ತಾಲೂಕಿನಲ್ಲಿ ಕುಡಿಯುವ ನೀರಿಗೂ ಪರದಾಡುವಂತಹ ಪರಿಸ್ಥಿತಿ. ಜನಸಾಮಾನ್ಯರಿಗೆ ಎದುರಾಗಿದೆ. ಹಾಗೂ. ರೈತರು ತಮ್ಮ ಜಮೀನುಗಳ ದಾಖಲಾತಿಗಳಾಗಿ ಕಂದಾಯ ಇಲಾಖೆಗೆ ದಿನನಿಡಿ ಅಲೆಯುತ್ತಿದ್ದಾರೆ. ಕೊಬ್ಬರಿ ಬೆಂಬಲ ಬೆಲೆಗಾಗಿ ತಿಪಟೂರು ರಿನಿಂದ ಬೆಂಗಳೂರಿಗೆ ಪಾದಯಾತ್ರೆ ಮಾಡಿದ್ದೇವೆ. ತಿಪಟೂರು ಜಿಲ್ಲೆ ಮಾಡಲು ನಡೆಯುತ್ತಿರುವ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದೇನೆ. ಸನ್ನ ಜನಸೇವೆ, ಹೋರಾಟ ಮೆಚ್ಚಿ ಜನತೆ ಆಶೀರ್ವಾದ ಮಾಡಿದರೆ ತಾಲೂಕಿನ ಜನರಿಗೆ 24 ಗಂಟೆಗಳ ಕಾಲ ತಾಲೂಕಿನ ಜನರ ಸೇವೆ ನೀಡಲು ಬದ್ಧನಾಗಿದ್ದೇನೆ. ಹಾಗೂ ತೀರ್ಥಕುಮಾರ್ ರವರಂಥಯುವ ಮುಖಂಡರು ಪಕ್ಷಕ್ಕೆ ಬಂದಿರುವುದು ಜೆಡಿಎಸ್‌ಗೆ ಮತ್ತಷ್ಟು ಬಲ ಬಂದಿದೆ ಎಂದು ತಿಳಿಸಿದರು.

ಸಮಾರಂಭದಲ್ಲಿ ಜಿಲ್ಲಾ ಪ್ರಧಾನಕಾರ್ಯದರ್ಶಿ ಶಿವಸ್ವಾಮಿ, ನಗರ ಯುವಘಟಕದ ಅಧ್ಯಕ್ಷ ಸುರ್ಜನ್,ತಾಲೂಕು ಕಾರ್ಯದರ್ಶಿ ನಟರಾಜು ಕಾರ್ಯಕರ್ತರು ಇನ್ನು ಮುಂತಾದವರು ಹಾಜರಿದ್ದರು."

ಕೆಇಬಿ ಪರಿಶಿಷ್ಟ ಜಾತಿ ಮತ್ತು ಪಂಗಡ ಕಲ್ಯಾಣ ಸಂಸ್ಥೆ ಚುನಾವಣೆಯಲ್ಲಿ 8 ಮಂದಿ ಆಯ್ಕೆ

ಮಧುಗಿರಿ : ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜಂಗಡ ವರ್ಗಗಳ ಕಲ್ಯಾಣ ಸಂಸ್ಥೆಯ ಮಧುಗಿರಿ ವಿಭಾಗ ಮತಕ್ಷೇತ್ರದ ಪ್ರತಿನಿಧಿಗಳ ಆಯ್ಕೆಗಾಗಿ ಗುರುವಾರ ನಡೆದ ಚುನಾವಣೆಯಲ್ಲಿ 8 ಮಂದಿ ಆಯ್ಕೆಯಾಗಿದ್ದಾರೆ. ಚುನಾವಣೆಯಲ್ಲಿ ಬಿ.ಜಿ. ಮಹೇಶ್, ಬಿ.ಎಂ

ಸಂಪಾದಕರು: ರವಿಕುಮಾರ್ ಸಿ.ಹೆಚ್.
RNI: KARKAN/2021/80805
ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ

ಸೂರ್ಯ ಪ್ರಗತಿ

SURYA PRAGATHI Kannada daily
ಡಿಜಿಟಲ್ ನ್ಯೂಸ್ ಕಹಾನಿ
ಪ್ರತಿ ಸುದ್ಧಿಯ ಧ್ವನಿ

suryapragathidailynews@gmail.com 9901010109 L2/RNP-1285/TMR/2025-27

Volume: 05 ಸಂಪುಟ: 05 Issue:147 ಸಂಚಿಕೆ: 147 Date:27-06-2026 Saturday RNI NO : KARKAN/2021/80805 L2/RNP-1285/TMR/2025-27 Page :4 ಪುಟ : 4 Price: 1.00 ಬೆಲೆ: 1.00 ರೂ

ನಾಡ್ ಸುದ್ದಿ

ಮನೆ ದೇವರಿಗೆ ವಿಶೇಷ ಪೂಜೆ ಸಲ್ಲಿಸಿದ ಡಿಸಿಎಂ

ಜೀವನದ ಪ್ರತಿಯೊಂದು ಮಹತ್ವದ ಹೆಜ್ಜೆಯಲ್ಲೂ ಆಶೀರ್ವಾದದ ಬೆಳಕಾಗಿ ಜೊತೆಯಾಗಿರುವ ಮನೆದೇವರಾದ ಮಾಗಡಿ ತಾಲ್ಲೂಕಿನ ಹೆಬ್ಬಳಲು ಗ್ರಾಮದ ಶ್ರೀ ಮುಳಕಟ್ಟಮ್ಮ ದೇವಿಯ ಸನ್ನಿಧಿಗೆ, ಉಪಮುಖ್ಯಮಂತ್ರಿಯಾದ ಬಳಿಕ ಡಾ ಜಿ ಪರಮೇಶ್ವರ್ ಮೊದಲ ಬಾರಿಗೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು.

. ತಾಯಿಯ ಕೃಪಾಕಟಾಕ್ಷ ಸದಾ ನಾಡಿನ ಜನರ ಮೇಲೆ ನೆಲೆಸಿರಲಿ; ರಾಜ್ಯದ ಅಭಿವೃದ್ಧಿ, ಜನಕಲ್ಯಾಣ ಮತ್ತು ಸೇವೆಯ ಪಥದಲ್ಲಿ ಮತ್ತಷ್ಟು ಸಮರ್ಪಣೆಯಿಂದ ಸಾಗುವ ಶಕ್ತಿ ದೊರಕಲಿ ಎಂದು ಪ್ರಾರ್ಥಿಸಿದರು.

ಪ್ರಾಮಾಣಿಕ ತೆರಿಗೆದಾರರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಅವರ ಸಮಸ್ಯೆಗಳನ್ನು ಆನ್‌ಲೈನ್ ಮೂಲಕವೇ ತ್ವರಿತವಾಗಿ ಬಗೆಹರಿಸಿ

ಬೆಂಗಳೂರು; ಸಿಎಂ ಡಿಕೆ ಶಿವಕುಮಾರ್ ತಮ್ಮ ಸರ್ಕಾರ ಆಡಳಿತ ಯಂತ್ರಕ್ಕೆ ಮತ್ತಷ್ಟು ವೇಗ ನೀಡುತ್ತಿದ್ದಾರೆ. ಕಳೆದ ವಾರ ಜಿಲ್ಲಾ ಡಿಸಿ, ಎಸ್ ಪಿಗಳ ಜೊತೆ ಸಭೆ ಮಾಡಿದ್ದ ಡಿಕೆ ಶಿವಕುಮಾರ್ ಇಲಾಖಾವಾರು ಮೀಟಿಂಗ್ ಮಾಡಿದರು. ಅದರಲ್ಲೂ ಸರ್ಕಾರದ ಖಜಾನೆ ತುಂಬುವ ಇಲಾಖೆಗಳು ಅಂದರೆ ಆದಾಯ ತೆರಿಗೆ ಇಲಾಖೆ ಮತ್ತು ಅಬಕಾರಿ. ಹೀಗಾಗಿ ಇವಗಳನ್ನ ಅರ್ಥ ಮಾಡಿಕೊಳ್ಳೋಕೆ ಸಿಎಂ ಹೆಜ್ಜೆ ಇಟ್ಟಿದ್ದರು. ವಿಧಾನಸೌಧದಲ್ಲಿ ಎರಡೂ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಸಭೆ ಮಾಡಿದ ಸಿಎಂ ಖಡಕ್ ಸೂಚನೆ ನೀಡಿದ್ದಾರೆ.

ತೆರಿಗೆ ಸೋರಿಕೆಯನ್ನು ತಡೆಯಬೇಕು ಎಂದ ಸಿಎಂ

ತೆರಿಗೆ ರಿಟರ್ನ್‌ಗಳನ್ನು ನಿಗದಿತ ಅವಧಿಯೊಳಗೆ ಸಲ್ಲಿಸದವರನ್ನು ಗುರುತಿಸಿ, ಅವರಿಂದ ಸಮಯಕ್ಕೆ ಸರಿಯಾಗಿ ರಿಟರ್ನ್ಸ್ ಸಲ್ಲಿಕೆ ಮಾಡಿಸಲು ಜಂಟಿ ಆಯುಕ್ತರುಗಳು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ನಮ್ಮ ಉದ್ದೇಶ ಯಾರಿಗೂ ಅನಗತ್ಯ ತೊಂದರೆ ನೀಡುವುದಲ್ಲ. ಪ್ರಾಮಾಣಿಕ ತೆರಿಗೆದಾರರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಅವರ ಸಮಸ್ಯೆಗಳನ್ನು ಆನ್‌ಲೈನ್ ಮೂಲಕವೇ ತ್ವರಿತವಾಗಿ ಬಗೆಹರಿಸಿ, ಘನತೆಯಿಂದ ನಡೆಸಿಕೊಳ್ಳಬೇಕು ಎಂದಿದ್ದಾರೆ.

ಬುದ್ಧಿವಂತಿಕೆಯಿಂದ ಕಾರ್ಯನಿರ್ವಹಿಸಿದರೆ ಗುರಿ ತಲುಪಲು ಸಾಧ್ಯ, ಆದರೆ ತೆರಿಗೆ ವಂಚನೆಗೆ ಮಾತ್ರ ಯಾವುದೇ ಅವಕಾಶ ಇರಬಾರದು.

ತೆರಿಗೆ ಸೋರಿಕೆಯನ್ನು ತಡೆಯುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು. ನಾನು ನೀಡಿರುವ ಪ್ರತಿಯೊಂದು ಸೂಚನೆಯೂ ಜಾರಿಯಾಗಿರಬೇಕು. ಮುಂದಿನ ಸಭೆಯಲ್ಲಿ ನಿಮ್ಮ ಕಾರ್ಯಕ್ಷಮತೆಯನ್ನು ಪರಿಶೀಲಿಸುತ್ತೇನೆ ಎಂದು ಹೇಳಿದ್ದಾರೆ.

ದಾಖಲೆ ಇಲ್ಲದ ವಾಹನಗಳಿಗೆ ಗಡಿಯಲ್ಲೇ ತಡೆ

ಯಾವುದೇ ಸರಕು ಸಾಗಣೆ ವಾಹನಗಳು ಸೂಕ್ತ ಲೆಕ್ಕಪತ್ರ ಹಾಗೂ ಅಗತ್ಯ ದಾಖಲೆಗಳಿಲ್ಲದೆ ಚೆಕ್‌ಪೋಸ್ಟ್ ಅಥವಾ ರಾಜ್ಯದ ಗಡಿಯನ್ನು ದಾಟುವಂತಿಲ್ಲ. ತೆರಿಗೆ ವಂಚನೆ ಹಾಗೂ ಬೋಗಸ್ ಕಂಪನಿಗಳ ಸೃಷ್ಟಿಕರ್ತರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ಇನ್ನು ಪಕ್ಕದ ರಾಜ್ಯಗಳ ವಾಣಿಜ್ಯ ತೆರಿಗೆ ಇಲಾಖೆ ಹಾಗೂ ಜಾರಿ ಸಂಸ್ಥೆಗಳೊಂದಿಗೆ ಉತ್ತಮ ಸಮನ್ವಯ ಸಾಧಿಸಿ, ಮಾಹಿತಿ ಹಂಚಿಕೆಯ ಮೂಲಕ ತೆರಿಗೆ ಸೋರಿಕೆಯನ್ನು ಪರಿಣಾಮಕಾರಿಯಾಗಿ ತಡೆಯುವಂತೆ ಸಿಎಂ ಡಿಕೆ ಶಿವಕುಮಾರ್ ಸೂಚಿಸಿದರು.

ಇಲಾಖೆ ಘನತೆ ಉಳಿದರೆ ಸರ್ಕಾರದ ಘನತೆ ಹೆಚ್ಚುತ್ತದೆ

ಸರ್ಕಾರಕ್ಕೆ ಕೆಟ್ಟ ಹೆಸರು ತರುವ ಯಾರನ್ನೂ, ಯಾವ ಪ್ರಯತ್ನವನ್ನೂ ನಾನು ಸಹಿಸುವುದಿಲ್ಲ. ಇಲಾಖೆಯಲ್ಲಿ ಹೊಸದಾಗಿ ಎಐಬಿ ಪದ್ಧತಿ ಜಾರಿಯಾದ ಬಳಿಕ ನಿರೀಕ್ಷಿತ ಪ್ರಮಾಣದಲ್ಲಿ ಬೆಳವಣಿಗೆ ಆಗಿದೆ. ಹೊಸದಾಗಿ 574 ಸನ್ನದುಗಳನ್ನು ಇ-ಹರಾಜು ಹಾಕಲು ನಿರ್ಧರಿಸ ಲಾಗಿದೆ. ಪರವಾನಗಿ ನವೀಕರಣ ವೈಶಿಷ್ಟವನ್ನು ಎರಡು ಕಂತುಗಳಲ್ಲಿ ಪಾವತಿಸಲು ಅವಕಾಶ ಕಲ್ಪಿಸಿ ಎಂದರು. ಅಕ್ಕ ಪಕ್ಕದ ರಾಜ್ಯಗಳಲ್ಲಿ ಇಲಾಖೆ ಹೇಗೆ ನಡೆಯುತ್ತಿದೆ ಎನ್ನುವ ವರದಿ ನೋಡಿದ್ದೇನೆ. ಇಲಾಖೆಗೆ ಕೊಟ್ಟಿರುವ ಗುರಿ ತಲುಪಲು ಶ್ರಮಿಸಬೇಕು. ನಿಮ್ಮಗಳು ಘನತೆ ಉಳಿಸಿಕೊಂಡರೆ ಇಲಾಖೆಯ ಘನತೆ ಉಳಿಯುತ್ತದೆ. ಇಲಾಖೆ ಘನತೆ ಉಳಿದರೆ ಸರ್ಕಾರದ ಘನತೆ ಹೆಚ್ಚುತ್ತದೆ. ಸರ್ಕಾರದ ಘನತೆ ಉಳಿಸುವ ವೃತ್ತಿಪರತೆ ಪ್ರದರ್ಶಿಸಿ, ಇಲ್ಲದಿದ್ದರೆ ಕಠಿಣ ಕ್ರಮ ಅನಿವಾರ್ಯ ಎಂದಿದ್ದಾರೆ.

ಬೆಂಗಳೂರಿನ ಒತ್ತಡ ಕಡಿಮೆಗೊಳಿಸಲು ಬಿಡದಿ ಅಭಿವೃದ್ಧಿಗೆ ಸರ್ಕಾರದ ಒತ್ತು : ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್

ಸೂರ್ಯಪ್ರಗತಿನ್ಯೂಸ್.ಕಾಂ

ನೇಮಕಾತಿ ಪ್ರಕ್ರಿಯೆ ತ್ವರಿತಗೊಳಿಸಲು ಕ್ರಮ; 72,000 ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿದ ಪರಮೇಶ್ವರ್ ಅವರು, ನಾವು ಪ್ರಣಾಳಿಕೆಯಲ್ಲಿ ನಮ್ಮ ಸರ್ಕಾರ ಬರುವಾಗ 2.5 ಲಕ್ಷ ಹುದ್ದೆಗಳು ಖಾಲಿಯಿದ್ದಾವೆ, ಹಂತ ಹಂತವಾಗಿ ನಾವು ಅದನ್ನು ತುಂಬುತ್ತೇವೆ ಎಂದು ಹೇಳಿದ್ದೆವು. ಅನೇಕ ಕಾರಣಗಳಿಂದ ಅದು ವಿಳಂಬವಾಯಿತು. ಒಳಮೀಸಲಾತಿ ವಿಚಾರ ಬಗೆಹರಿಯದೆ ಇದ್ದದ್ದು ಸಮಸ್ಯೆಯಾಗಿ ಪರಿಣಮಿಸಿತ್ತು ಹೀಗಾಗಿ ಒಳಮೀಸಲಾತಿ ಕುರಿತು ನ್ಯಾಯಮೂರ್ತಿ ನಾಗಮೋಹನ್‌ದಾಸ್ ಅವರ ಸಮಿತಿಯ ವರದಿ ಆಧಾರದ ಮೇಲೆ ಕೂಲಂಕಷವಾಗಿ ಪರಿಶೀಲನೆ ಮಾಡಿ ಒಳಮೀಸಲಾತಿ ಸಮಸ್ಯೆಯನ್ನು ಬಗೆಹರಿಸಲಾಯಿತು. ಬಳಿಕ ಬಜೆಟ್‌ನಲ್ಲಿಯೇ 56,942 ಹುದ್ದೆಗಳನ್ನು ನೇಮಕಾತಿ ಮಾಡುತ್ತೇವೆ ಎಂದು ತಿಳಿಸಿದ್ದೆವು ಎಂದರು. ಬಳಿಕ ಅದರ ಪ್ರಕ್ರಿಯೆಗಳು ಪ್ರಾರಂಭಗೊಂಡಿದ್ದವು. 24,000 ಹುದ್ದೆಗಳಿಗೆ ಎಫ್‌ಡಿಎವರು ಕೂಡ ಅನುಮತಿಯನ್ನು ನೀಡಿದ್ದರು. ಎಲ್ಲಾ ಇಲಾಖೆಗಳಿಗೆ ನೋಟಿಫಿಕೇಷನ್ ಮಾಡಿ ಎಂದು ನಾವು ತಿಳಿಸಿದ್ದೆವು. ಈ ಮಧ್ಯೆ ಸರ್ಕಾರದಲ್ಲಿ ಮುಖ್ಯಮಂತ್ರಿಗಳ ಬದಲಾವಣೆಯಾದ ನಂತರ ಅದನ್ನು ಪುನರ್ ಪರಿಶೀಲನೆ ಮಾಡಿ ಈಗ 72,000 ಹುದ್ದೆಗಳನ್ನು ತುಂಬಬೇಕು ಎಂದು ತೀರ್ಮಾನ ಮಾಡಲಾಗಿದೆ. ಈ ಬಗ್ಗೆ ಕಂದಾಯ ಇಲಾಖೆಗೆಲ್ಲರಿಂದತೆ ವಿವಿಧ ಇಲಾಖೆಗಳಿಗೆ ನೋಟಿಫಿಕೇಷನ್ಸ್ ಮಾಡಲು ಅಧಿಕಾರಿಗಳಿಗೆ ಸೂಚನೆಯನ್ನು ನೀಡಲಾಗಿದೆ ಎಂದರು.

ಅದೇ ರೀತಿ ಶಿಕ್ಷಕರು, ವೈದ್ಯರು, ನರ್ಸುಗಳು, ಇಂಜಿನಿಯರ್‌ಗಳು ಸೇರಿದಂತೆ ಎಲ್ಲಾ ಇಲಾಖೆಗಳಿಗೆ ತಡಮಾಡದಂತೆ ತಿಳಿಸಬೇಕೆಂದು ಮೊನ್ನೆ ನಡೆದ ಕ್ಯಾಬಿನೆಟ್‌ನಲ್ಲಿ ಚರ್ಚೆಮಾಡಲಾಗಿದೆ. ಅದಕ್ಕಾಗಿ ಮುಖ್ಯಮಂತ್ರಿಗಳು ಇಬ್ಬರು ಅಧಿಕಾರಿಗಳಾದ ಎಎಎಸ್ ಅಧಿಕಾರಿ ಉಮಾಮಹದೇವನ್ ಮತ್ತು ಗೌರವ್ ಗುಪ್ತಾ ಅವರನ್ನು ಮೇಲುಸ್ತುವಾರಿಗಾಗಿ ನೇಮಕ ಮಾಡಿದ್ದಾರೆ ಎಂದರು.

ನಮ್ಮ ಉದ್ದೇಶವೆಂದರೆ ರಾಜ್ಯದಲ್ಲಿ ಎನೆಗೆ ನಿರುದ್ಯೋಗಿಗಳಿದ್ದಾರೆ, ಅವರೆಲ್ಲರೂ ಅನೇಕ ಸಂದರ್ಭದಲ್ಲಿ ನೇಮಕಾತಿ ಮಾಡುವಂತೆ ಬೀದಿಗಿಳಿದು ಹೋರಾಟ ಮಾಡಿರುವುದನ್ನು ನಾವು ನೋಡಿದ್ದೇವೆ. ಹಾಗಾಗಿ ನಾವು ವೇಗವಾಗಿ 72,000 ಹುದ್ದೆಯನ್ನು ತುಂಬುತ್ತಿದ್ದೇವೆ ಎಂದರು.

ಮತ್ತೊಮ್ಮೆ ಹೇಳುತ್ತೇನೆ, ನಾವು ರೈತರನ್ನು ಒಕ್ಕಲೆಬ್ಬಿಸುವುದಿಲ್ಲ

ರೈತರನ್ನು ಆಚೆಹಾಕಿ ಟೌನ್‌ಶಿಪ್ ನಿರ್ಮಾಣ ಮಾಡುವುದರಲ್ಲಿ ಅರ್ಥವಿಲ್ಲ

ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ರೈತರಿಗೆ ಅನುಕೂಲವಾಗಿ ಸಿಎಂ ಅವರ ನಿರ್ಧಾರ ಬದಲಾಗಿರಬೇಕೆಂದೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ನಾನು ಮೊದಲೇ ಹೇಳಿದಂತೆ ರೈತರನ್ನು ಒಕ್ಕಲೆಬ್ಬಿಸುವ ಕೆಲಸವನ್ನು ನಾವು ಮಾಡುವುದಿಲ್ಲ. ಒತ್ತಾಯಪೂರ್ವಕವಾಗಿ ರೈತರನ್ನು ತೆಗೆದು ಆಚೆ ಹಾಕಿ ನಾವು ಟೌನ್‌ಶಿಪ್ ಕಟ್ಟುವುದರಲ್ಲಿ ಯಾವುದೇ ಅರ್ಥವಿಲ್ಲ. ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಅವರ ಒಪ್ಪಿಗೆಯ ಮೂಲಕ ಅವರ ಜಮೀನನ್ನು ಪಡೆದು ಟೌನ್‌ಶಿಪ್ ಮಾಡಲು ಈಗಾಗಲೇ ಮುಖ್ಯಮಂತ್ರಿಗಳು ಸೂಚನೆಯನ್ನು ನೀಡಿದ್ದಾರೆ. ಅವರಿಗೆ ಒಂದು ವೇಳೆ ತಮಗೆ ಕೊಡುವಂತಹ ಪರಿಹಾರ ಸಾಕಾಗುತ್ತಿಲ್ಲ ಎಂದು ಅನಿಸಿದರೆ ಅದನ್ನು ಕೂಡ ಇನ್ನು ಮುಂದೆ ಹೆಚ್ಚು ಮಾಡುವಂತಹ ಸಾಧ್ಯತೆಗಳು ಇದೆ. ಒಟ್ಟಾರೆ ಯಾವುದೇ ಗೊಂದಲ ಇಲ್ಲದೆ ಬಿಡದಿ ಟೌನ್‌ಶಿಪ್ ಮಾಡಬೇಕು ಎನ್ನುವುದು ನಮ್ಮ ಉದ್ದೇಶ ಎಂದರು.

ಎಐ ಹಬ್‌ಗಳಿಗೆ ಹೆಚ್ಚಿನ ನೀರಿನ ಅಗತ್ಯವಿರುವ ಹಿನ್ನೆಲೆ, ಬಿಡದಿ ಪ್ರದೇಶದ ನೀರಿನ ಲಭ್ಯತೆಯನ್ನು ಮುಂದಿನ 40 ವರ್ಷಗಳ ದೃಷ್ಟಿಯಿಂದ ಸರ್ಕಾರ ಬಳಸಿಕೊಳ್ಳುತ್ತಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಎಐ ಸಿಟಿಯ್ ಮಾಡುವುದಕ್ಕೆ ಯಾವುದೆಲ್ಲ ಮಾನದಂಡಗಳು ಇವೆ ಎಂಬುದರ ಸ್ಪಷ್ಟ ಮಾಹಿತಿ ಯಾರಿಗೂ ಗೊತ್ತಿಲ್ಲ. ಈಗ ಅದನ್ನು ನಾವು ಬೇರೆ ಬೇರೆ ಕಡೆ ಪತ್ತೆ ಮಾಡುತ್ತಿದ್ದೇವೆ. ಇದು ಎಐ ಹಬ್‌ಗಾಗಿ ಮಾಡುತ್ತಿರುವಂತದಲ್ಲ. ಬೆಂಗಳೂರಿನ ಮೇಲೆ ಸಂಚಾರದಟ್ಟಣೆ ಸೇರಿದಂತೆ ಅನೇಕ ಒತ್ತಡವಿದೆ. ನೈಸ್ ಪ್ರಾಜೆಕ್ಟ್‌ಮಾಡಿದ ಸಂರ್ಧದಲ್ಲಿ 7 ಟೌನ್‌ಶಿಪ್ ಮಾಡಬೇಕು ಎಂದು ಪ್ರಸ್ತಾವನೆ ಬಂದಿದ್ದವು. ಇದರ ಉದ್ದೇಶ ಬೆಂಗಳೂರಿನ ಮೇಲಿರುವ ಒತ್ತಡವನ್ನು ಕಡಿಮೆಮಾಡಬೇಕು ಎನ್ನುವುದಾಗಿತ್ತು ಪಕ್ಕದಲ್ಲಿರುವ ಕೋಲಾರ, ತುಮಕೂರು ರಾಮನಗರ ಪಟ್ಟಣವನ್ನು ಅಭಿವೃದ್ಧಿ ಮಾಡಿದರೆ ಬೆಂಗಳೂರಿನ ಮೇಲಿರುವ ಒತ್ತಡ ಕಡಿಮೆಯಾಗಲಿದೆ ಎನ್ನುವ ಉದ್ದೇಶ. ಈ ಕಾರಣಗಳಿಂದ ಬಿಡದಿ ಟೌನ್‌ಶಿಪ್ ಆದರೆ ಸ್ವಲ್ಪ ಸುಧಾರಿಸಬಹುದು ಎನ್ನುವ ಆಶಾಭಾವನೆಯನ್ನು ವ್ಯಕ್ತಪಡಿಸಿದರು.

ನಾಡಪ್ರಭು ಕೆಂಪೇಗೌಡರ 517ನೇ ಜಯಂತೋತ್ಸವ ಸಮುದಾಯದ ಸಾಧಕರಿಗೆ ವಿಶೇಷ ಸನ್ಮಾನ

ಸೂರ್ಯಪ್ರಗತಿನ್ಯೂಸ್.ಕಾಂ

ಕೊರಟಿಗೆರೆ:- ಬೆಂಗಳೂರು ನಗರದನಿರ್ಮಾತೃನಾಡಪ್ರಭು ಕೆಂಪೇಗೌಡ ವಿಜಯನಗರ ಸಾಮ್ರಾಜ್ಯದಲ್ಲಿ ದಕ್ಷ ಆಡಳಿತ ನಡೆಸಿದ ಪಾಳೇಗಾರ. ಆಧುನಿಕ ಬೆಂಗಳೂರಿಗೆ 19ನೇ ಶತಮಾನದಲ್ಲಿ ದೂರ ದೃಷ್ಟಿಯಿಂದ ಭದ್ರಾಪಾಯ ಹಾಕಿಕೊಟ್ಟ ಇತಿಹಾಸವು ಕರ್ನಾಟಕದ ಹೆಮ್ಮೆ ಇಂತಹ ಮಹಾನ್ ನಾಯಕರ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲು ಕೊರಟಿಗೆರೆ ಆಡಳಿತ ಮತ್ತು ಒಕ್ಕಲಿಗ ಕ್ಷೇಮಾಭಿವೃದ್ಧಿ ಸಂಘ ಸಜ್ಜಾಗಿದೆ.

ಕೊರಟಿಗೆರೆ ಹೃದ್ದಾಣ ಸಾದರ ಹಿಂದೂ ಸಮುದಾಯ ಭವನದಲ್ಲಿ ಜೂ.27ರ ಶನಿವಾರ ಬೆ.10.30ಕ್ಕೆ ಕೊರಟಿಗೆರೆ ಆಡಳಿತ ಮತ್ತು ಒಕ್ಕಲಿಗ ಕ್ಷೇಮಾಭಿವೃದ್ಧಿ ಸಂಘ ನಾಡಪ್ರಭು ಕೆಂಪೇಗೌಡರ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲು ಅಧಿಕಾರಿ ವರ್ಗ ಮತ್ತು ಮುಖಂಡರು ಶ್ರಮಿಸುತ್ತಿದ್ದಾರೆ. ಜಯಂತಿ ಕಾರ್ಯಕ್ರಮಕ್ಕೆ ಸಾವಿರಾರು ಜನರು ಸೇರುವ ನಿರೀಕ್ಷೆಯಿದ್ದು ವೇದಿಕೆಯ ವಿಶೇಷವಾಗಿ ಶೃಂಗಾರಗೊಂಡಿದೆ. ಒಕ್ಕಲಿಗರಕ್ಷೇಮಾಭಿವೃದ್ಧಿ ಸಂಘ. ಕೊರಟಿಗೆರೆ ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾಗಿ ರಂಗರಸಯ್ಯ, ಉಪಾಧ್ಯಕ್ಷ ಎಲ್.ವಿಶ್ವನಾಥ್, ಕಾರ್ಯದರ್ಶಿ ನರೂಂಡಹಳ್ಳಿ ಜಯಪ್ರಕಾಶ್ ಎಸ್., ಖಜಾಂಚಿ ಡಿ.ಎಂ.ಸಾಕರಾಜು, ನಿರ್ದೇಶಕರಾಗಿ ಕಾಮರಾಜು, ಲಕ್ಷ್ಮೀಶ, ದೊಡ್ಡಯ್ಯ, ವೆಂಕಟಪ್ಪ, ರತ್ನಾಕರ, ರವೀಂದ್ರ, ರವಿಕುಮಾರ್, ಮಲ್ಲಿಕಾರ್ಜುನ, ರಂಗನಾಥ, ಬೋರೇಗೌಡ, ವೀರಕ್ಕಾಶಯ್ಯ, ನಾಗೇಶ್ ಕುಮಾರ್, ನಾಗರಾಜು, ಶ್ರೀನಿವಾಸಮೂರ್ತಿ, ರವೇಶ್, ಮಂಜುನಾಥ, ಕೃಷ್ಣಮೂರ್ತಿ ಕಾರ್ಯನಿರ್ವಹಿಸುತ್ತಿದ್ದಾರೆ.

ನಾಡಪ್ರಭು ಕೆಂಪೇಗೌಡರ 517ನೇ ಜಯಂತೋತ್ಸವ ಕಾರ್ಯಕ್ರಮಕ್ಕೆ ಆಗಮಿಸುವ ಅಧಿಕಾರಿ ವರ್ಗ, ಸಮುದಾಯದ ಮುಖಂಡರು ಮತ್ತು ಪತ್ರಕರ್ತರಿಗೆ ಹೃದ್ದ ಆತಿಥ್ಯದ ಊಟವನ್ನು ನೀಡುವುದಾಗಿ ಕೊರಟಿಗೆರೆಯ ಬಿ.ಎಲ್.ಓ.ಗಳ ಜೊತೆ ನಿಕಟ ಸಂಪರ್ಕ ಹೊಂದಿ ಎಸ್.ಐ.ಆರ್. ಕಾರ್ಯಕ್ರಮ ಪರಿಣಾಮಕಾರಿಯಾಗಿ ಜನರಿಗೆ ತಲುಪಿಸಿದಾಗ ಮಾತ್ರ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಮಂಜುನಾಥ ಮೊಸಿಕೊಡಿದ್ದಾರೆ.

ಸೆ.1 ರಿಂದ ಗ್ರಾಮಾಂತರದ ಎಲ್ಲಾ ಬೂತ್‌ಗಳಲ್ಲಿ SIR ಅರಿವು ಮಾಜಿಶಾಸಕ ಡಿ ಸಿ ಗೌರಿ ಶಂಕರ್

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು ಸೆಪ್ಟೆಂಬರ್ 1 ರಿಂದ ತುಮಕೂರು ಗ್ರಾಮಾಂತರದ ಎಲ್ಲಾ 223 ಬೂತ್ ಗಳಿಗೂ ಭೇಟಿ ನೀಡಿ ಎಸ್.ಐ.ಆರ್. ಅರಿವು ಮೂಡಿಸಲು ತ್ರಮಿಸುವುದಾಗಿ ನಿಕಟಪೂರ್ವ ಶಾಸಕರಾದ ಡಿ.ಸಿ.ಗೌರಿಶಂಕರ್ ತಿಳಿಸಿದರು. ಅವರು ನಗರದ ಖಾಸಗಿ ಹೋಟೆಲ್ ನಲ್ಲಿ ಕಾಂಗ್ರೆಸ್ ನಡೆಸಿ ಮತಗಳನ್ನು ರಕ್ಷಿಸುವ ಕಡೆ (ಎಸ್.ಐ.ಆರ್) ಅರಿವು ಮೂಡಿಸುವ ಕಾರ್ಯಗಾರದಲ್ಲಿ ಭಾಗವಹಿಸಿ ಈ ಕುರಿತು ಮಾತನಾಡುತ್ತಾ ಎಸ್.ಐ.ಆರ್. ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಗ್ರಾಮಾಂತರ ಕ್ಷೇತ್ರದಲ್ಲಿ ಜುಲೈ 1 ರಿಂದ ಮೂರು ಪ್ರಚಾರ ವಾಹನಗಳನ್ನು ಕ್ಷೇತ್ರದಲ್ಲಿ ಸಂಚರಿಸಲು ತಯಾರಿ ಮಾಡಲಾಗಿದ್ದು, ಇದರಿಂದ ಜನರಲ್ಲಿ ಜಾಗೃತಿ ಮೂಡಿಸಲಾಗುವುದು, ಇದರ ಜೊತೆಗೆ ಕಾಂಗ್ರೆಸ್ ಸರ್ಕಾರದ ಜಾರಿಗೊಳಿಸಿರುವ ಯೋಜನೆಗಳ ಬಗ್ಗೆಯೂ ಜನರಲ್ಲಿ ಅರಿವು ಮೂಡಿಸಲಾಗುವುದು ಎಂದರು.

ಮುಂಬರುವ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಗಳ ಚುನಾವಣೆಯನ್ನು ಮುಖ್ಯ ಗುರಿಯಾಗಿಸಿಕೊಂಡು ಎಸ್.ಐ.ಆರ್. ಜಾಗೃತಿ ಅಭಿಯಾನ ಹಮ್ಮಿಕೊಳ್ಳಲಾಗಿದೆ, ಈ ಅಭಿಯಾನವನ್ನು ಸಾಕಾರಗೊಳಿಸಿರುವುದು ಎಲ್ಲರ ಜವಾಬ್ದಾರಿ ಎಂದು ತಿಳಿಸಿದರು.

ಕ್ಷೇತ್ರದ ಬೂತ್ ಮಟ್ಟದಲ್ಲಿರುವ ಬಿ.ಎಲ್.ಎ.ಗಳು, ಬಿ.ಎಲ್.ಓ.ಗಳ ಜೊತೆ ನಿಕಟ ಸಂಪರ್ಕ ಹೊಂದಿ ಎಸ್.ಐ.ಆರ್. ಕಾರ್ಯಕ್ರಮ ಪರಿಣಾಮಕಾರಿಯಾಗಿ ಜನರಿಗೆ ತಲುಪಿಸಿದಾಗ ಮಾತ್ರ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಯಶಸ್ಸುಗೊಳಿಸಲು ಸಾಧ್ಯವೆಂದರು.

ಕೆ.ಪಿ.ಸಿ.ಸಿ. ಅಧ್ಯಕ್ಷರಾಗಿದ್ದ ಡಿ.ಕೆ.ಶಿವಕುಮಾರ್ ಆದೇಶದ ಮೇರೆಗೆ ಕೆ.ಪಿ.ಸಿ.ಸಿ. ಘಟಕದ ಹಾಗೂ ಸಂಬಂಧಿಸಿದ ಶಾಸಕರು, ಮಂತ್ರಿಗಳು ತಮ್ಮ ಕ್ಷೇತ್ರದ ವ್ಯಾಪ್ತಿಯಲ್ಲಿ ಎಲ್ಲಾ ಬಿ.ಎಲ್.ಎ.ಗಳಿಗೆ ಅರಿವು ಮೂಡಿಸುವ ಸಂದೇಶ ನೀಡಿದ್ದರು, ಈಗ ಅವರು ಮುಖ್ಯ ಮಂತ್ರಿಗಳಾಗಿದ್ದಾರೆ, ಅವರ ಆದೇಶದಂತೆ ಗ್ರಾಮಾಂತರ ಕ್ಷೇತ್ರದಲ್ಲಿ ಎಸ್.ಐ.ಆರ್. ಬಗ್ಗೆ ಅರಿವು ಮೂಡಿಸುವ ಕಾರ್ಯಗಾರ ಅಯೋಜಿಸಲಾಗಿದೆ ಕೆ.ಪಿ.ಸಿ.ಸಿ.ಯ ಆದಾಂ ಖಾನ್ ಭೇಟಿ ಕೊಟ್ಟು ಕಾರ್ಯಗಾರದಲ್ಲಿ ಜನರಿಗೆ ಅರಿವು ಮೂಡಿಸಿದ್ದಾರೆಂದರು. ಎಸ್.ಐ.ಆರ್. ಎಂಬುದು ದೊಡ್ಡ ಸವಾಲಿನ ಕೆಲಸ, ಗ್ರಾಮೀಣ ಭಾಗದಲ್ಲಿ ಹಲವಾರು ಸಮಸ್ಯೆಗಳಿವೆ, ನಮ್ಮದೇ ಆದ ನೆಟ್ ವರ್ಕ್ ರೂಪಿಸಿಕೊಂಡು ಯಶಸ್ವಿಗೊಳಿಸುತ್ತ